# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಜುಲೈ 28, 2022

ಸಂಪುಟ : 49  ಸಂಚಿಕೆ : 75  ☎ 254736  91642 99999  RNI No: 27369/75  KA/SK/CTA-275/2021-2023. O/P @ B.V. Nagar P.O.  ಪುಟ : 6  ರೂ : 5.00  www.janathavani.com  janathavani@mac.com





## ಜಿಹಾದಿಗಳನ್ನು ಎನ್‌ಕೌಂಟರ್ ಮಾಡಿ

### ಹಿಂದೂ ಕಾರ್ಯಕರ್ತರ ಹತ್ಯೆ, ನಮ್ಮದೇ ಸರ್ಕಾರದ ದೌರ್ಬಲ್ಯ: ವೀರೇಶ್

ದಾವಣಗೆರೆ, ಜು.27- ಹಿಂದೂ ಕಾರ್ಯಕರ್ತರನ್ನು ಹತ್ಯೆ ಮಾಡುತ್ತಿರುವ ಜಿಹಾದಿಗಳಿಗೆ ಎನ್‌ಕೌಂಟರ್ ಇಲ್ಲವೇ ಗಲ್ಲು ಶಿಕ್ಷೆ ವಿಧಿಸುವ ಮೂಲಕ ಅವರ ಅಟ್ಟಹಾಸಕ್ಕೆ ಹೆಡೆಮುರಿ ಕಟ್ಟುವಂತೆ ನಗರ ಪಾಲಿಕೆ ಮಾಜಿ ಮೇಯರ್, ಸದಸ್ಯ ಎಸ್.ಟಿ. ವೀರೇಶ್ ತಮ್ಮದೇ ಸರ್ಕಾರಕ್ಕೆ ಒತ್ತಾಯಿಸಿದರು.

ಅವರು, ಇಂದು ಸಂಜೆ ನಗರದ ಜಯದೇವ ವೃತ್ತದಲ್ಲಿ ಜಿಲ್ಲಾ ಯುವ ಮೋರ್ಚಾದಿಂದ ಹಮ್ಮಿಕೊಂಡಿದ್ದ ಹತ್ಯೆಯಾದ ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇದುವರೆಗೂ ಹಿಂದೂ ಕಾರ್ಯಕರ್ತರ ಹತ್ಯೆಗಳು ಒಂದೇ ರೀತಿಯಾಗಿ ನಡೆದಿದ್ದು, ಪ್ರವೀಣ್ ನೆಟ್ಟಾರು ಅವರನ್ನು ಜಿಹಾದಿಗಳು ತಲವಾರ್ ಹಿಡಿದು ಹತ್ಯೆ ಮಾಡಿದ್ದಾರೆ. ಹಿಂದೂ ಕಾರ್ಯಕರ್ತ ಹರ್ಷ ಅವರ ಹತ್ಯೆಗೆ ಕೊನೆಯಾಗ ಬೇಕಿತ್ತು. ಆದರೆ ಜಿಹಾದಿಗಳು ಇನ್ನೂ ಅನೇಕ ಹಿಂದೂ ಕಾರ್ಯಕರ್ತರ ಹತ್ಯೆ ಮುಂದುವರೆಸಿದ್ದಾರೆಂದರೆ ನಮ್ಮ ರಾಜ್ಯದ ಬಿಜೆಪಿ ನಾಯಕರ, ಮುಖ್ಯಮಂತ್ರಿಗಳ, ಗೃಹ ಮಂತ್ರಿಗಳ, ಯಾವುದೇ ಅಧಿಕಾರಿಗಳ, ಕಾನೂನಿನ ಭಯ ಇಲ್ಲದೇ ಜಿಹಾದಿಗಳು ತಮ್ಮ ಕ್ರೌರ್ಯವನ್ನು ಮೆರೆಯುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

> ಉತ್ತರ ಪ್ರದೇಶದಲ್ಲಿ ಹಿಂದೂ ಕಾರ್ಯಕರ್ತರ ಮೇಲೆ ಹಲ್ಲೆಗಳು ನಡೆದಾಗ ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗೂಂಡಾ, ಜಿಹಾದಿಗಳಿಗೆ ಹೆಡೆಮುರಿ ಕಟ್ಟಿದ್ದಾರೆ. ನಮಗೆ ಜೈಲಿಗೆ ಹಾಕಿ ಎಂದು ಸ್ವತಃ ಅವರೇ ಬರುತ್ತಿದ್ದಾರೆ. ಅಲ್ಲಿರುವ ಸಂವಿಧಾನವೇ ಇಲ್ಲೂ ಇದೆ. ಆದರೆ, ಅದೇ ರೀತಿಯ ಸಂವಿಧಾನದ ಕಾನೂನುಗಳು ನಮ್ಮ ರಾಜ್ಯದಲ್ಲಿ ಆಡಳಿತ ಮಾಡುವ ನಮ್ಮದೇ ಸರ್ಕಾರ ಏಕೆ ಪಾಲನೆ ಮಾಡುತ್ತಿಲ್ಲ. ಹಿಂದೆ ರಾಜು, ಹರ್ಷ ಹತ್ಯೆಯಾಯಿತು. ಈಗ ಪ್ರವೀಣ್ ಮುಂದೆ ಹೀಗೆ ಹಿಂದೂ ಪಕ್ಷದ ಕಾರ್ಯಕರ್ತನ ಮನೆ ಕತ್ತಲಾಗಬಾರದು, ತಾಯಿಯ ಮಗ ಹೆಣವಾಗಿ ಮನೆಗೆ ಬರುವಂತೆ ಆಗಬಾರದು, ಸಹೋದರಿಯ ಮಾಂಗಲ್ಯ ಸರ ಬೀದಿಗೆ ಬೀಳಬಾರದು ಅಂದರೆ ನಮ್ಮ ಸರ್ಕಾರ ಇನ್ನಾದರೂ ಹಿಂದೂ ಕಾರ್ಯಕರ್ತರ ಹತ್ಯೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಂದಾಗಬೇಕು.
>
> - ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯ.

**ಪ್ರವೀಣ್ ನೆಟ್ಟಾರುಗೆ ಬಿಜೆಪಿ ಯುವ ಮೋರ್ಚಾ ಶ್ರದ್ಧಾಂಜಲಿ**

ಕಾರ್ಯಕರ್ತರು ಅಧಿಕಾರಕ್ಕಾಗಿ ಹೋರಾಟ ಮಾಡುತ್ತಿಲ್ಲ. ಹಿಂದುತ್ವಕ್ಕಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಂದು ಅವರು ಭಯದ ವಾತಾವರಣದಲ್ಲಿ ಇದ್ದಾರೆ. ಇದನ್ನು ದೂರ ಮಾಡಬೇಕಾದರೆ ಹಿಂದೂ ಕಾರ್ಯಕರ್ತರ ಜೀವ ಯಾರು ತೆಗೆದಿದ್ದಾರೆ ಅವರಿಗೆ ಈ ಭೂಮಿ ಮೇಲೆ ಬದುಕಲು ಅಧಿಕಾರ ಇಲ್ಲ ಮತ್ತು ಬದುಕಲು ಅವಕಾಶ ಕೊಡಬಾರದು. ಜಿಹಾದಿಗಳನ್ನು ಹತೋಟಿಗೆ ತರಲು ರಾಜ್ಯ ಸರ್ಕಾರ ಎನ್‌ಕೌಂಟರ್, ಗಲ್ಲು ಶಿಕ್ಷೆ ಮೂಲಕ ಸದೆ ಬಡಿಯುವುದೊಂದೇ ಪರಿಹಾರ. ಈ ಶಿಕ್ಷೆಯನ್ನೇ ವಿಧಿಸಲು ಸರ್ಕಾರ ನಿರ್ಧಾರ ಮಾಡಬೇಕು ಎಂದು ಆಗ್ರಹಿಸಿದರು. ಈ ರಾಜ್ಯದಲ್ಲಿ ರಾಜು, ಶರತ್, ಹರ್ಷ ಹತ್ಯೆ (3ನೇ ಪುಟಕ್ಕೆ)

## ಬಿಜೆಪಿ ಯುವ ಮೋರ್ಚಾ ಸದಸ್ಯನ ಹತ್ಯೆ

### ದಕ್ಷಿಣ ಕನ್ನಡದ ಬೆಳ್ಳಾರೆಯಲ್ಲಿ ಕೋಳಿ ಅಂಗಡಿ ನಡೆಸುತ್ತಿದ್ದ ಪ್ರವೀಣ್ ನೆಟ್ಟಾರು

ಬೆಂಗಳೂರು, ಜು. 27 – ದಕ್ಷಿಣ ಕನ್ನಡದ ಬೆಳ್ಳಾರೆಯಲ್ಲಿ ಬಿಜೆಪಿ ಯುವ ಮೋರ್ಚಾ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಮಾಡಲಾಗಿದೆ.

ಮಂಗಳವಾರ ರಾತ್ರಿ ಬಿಜೆಪಿ ಯುವ ಮೋರ್ಚಾ ಸದಸ್ಯ ಪ್ರವೀಣ್ ನೆಟ್ಟಾರು ಅವರನ್ನು ಬೆಳ್ಳಾರೆಯಲ್ಲಿ ಹತ್ಯೆ ಮಾಡಲಾಗಿತ್ತು. ತಮ್ಮ ಅಂಗಡಿ ಮುಚ್ಚಿ ಅವರು ಮರಳುವ ವೇಳೆ ಹತ್ಯೆ ನಡೆದಿದೆ.



ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಪ್ರವೀಣ್ ತಲೆ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ಮಾಡಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಅವರು, ಆಸ್ಪತ್ರೆಗೆ ಸಾಗಿಸುವ ಹಾದಿಯಲ್ಲಿ ಸಾವನ್ನಪ್ಪಿದ್ದಾರೆ.

ಪ್ರವೀಣ್ ಅವರು ಬೆಳ್ಳಾರೆಯಲ್ಲಿ ಕೋಳಿ ಅಂಗಡಿಯೊಂದನ್ನು ನಡೆಸುತ್ತಿದ್ದರು.

ಪ್ರವೀಣ್ ಅವರ ಮೃತದೇಹವನ್ನು ಹಿಂದೂ ಸಂಘಟನೆಗಳ ಕಾರ್ಯಕರ್ತರು ಮೆರವಣಿಗೆಯಲ್ಲಿ ನೆಟ್ಟಾರುಗೆ ತೆಗೆದುಕೊಂಡು ಹೋಗಿದ್ದಾರೆ. ಅಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

**ಬಂದ್‌ಗೆ ಕರೆ :** ಸಂಘ ಪರಿವಾರ ಹತ್ಯೆ ಖಂಡಿಸಿ ಪುತ್ತೂರು, ಕಡಬ ಹಾಗೂ ಸುಳ್ಯಗಳಲ್ಲಿ ಬುಧವಾರ ಬಂದ್‌ಗೆ ಕರೆ ನೀಡಿತ್ತು.

**ಕಲ್ಲು ತೂರಾಟ :** ಘಟನೆಯ ನಂತರ (2ನೇ ಪುಟಕ್ಕೆ)

### ಹಂತಕರ ಶೀಘ್ರ ಬಂಧನಕ್ಕೆ ಸಿಎಂ ಆದೇಶ

**ಸೌಹಾರ್ದ ಕದಡುವವರನ್ನು ಸದೆಬಡಿಯುತ್ತೇವೆ: ಬೊಮ್ಮಾಯಿ**

ಬೆಂಗಳೂರು, ಜು. 27 - ಸಮಾಜದ ಸ್ವಾಸ್ಥ್ಯ, ಕೋಮು ಸೌಹಾರ್ದತೆಯನ್ನು ಕದಡುವ ಕಾರ್ಯವನ್ನು ವ್ಯವಸ್ಥಿತವಾಗಿ ಒಂದು ವರ್ಗದವರು ಮಾಡುತ್ತಿದ್ದಾರೆ. ಅಂತಹವರನ್ನು ಸದೆಬಡಿಯುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದೂ ಸಂಘಟನೆಯ ಕಾರ್ಯಕರ್ತರನ್ನು ಗುರಿಯಾಗಿಟ್ಟುಕೊಂಡು ಅವರ ಮೇಲೆ ಹಲ್ಲೆ, ಇಲ್ಲವೇ ಕೊಲೆ, ಸುಲಿಗೆ ಮಾಡಿ, ಶಾಂತಿ ಕದಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದಿದ್ದಾರೆ. ಈಗಾಗಲೇ ಅಂತಹವರ ವಿರುದ್ಧ ಸಾಕಷ್ಟು ಕಠಿಣ ಕ್ರಮ ಜರುಗಿಸಿ ಹೆಡೆಮುರಿ ಕಟ್ಟಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ವರ್ಗ ಆಗಿಂದ್ದಾಗ್ಗೆ ಇಂತಹ ಕೃತ್ಯ ನಡೆಸುತ್ತಲೇ ಇದ್ದಾರೆ ಎಂದಿದ್ದಾರೆ.

ಬೆಂಗಳೂರು, ಮಂಗಳೂರು, ಶಿವಮೊಗ್ಗ ಸೇರಿದಂತೆ ಕೆಲವೆಡೆ ಕೋಮು ಗಲಭೆ ಸೃಷ್ಟಿಸಿ, ಸರ್ಕಾರಕ್ಕೆ ಕಪ್ಪು ಚುಕ್ಕೆ ತರುವ ಪ್ರಯತ್ನ ಮಾಡುತ್ತಲೇ ಇರುತ್ತಾರೆ.

ಇಂತಹವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಂಡಿದ್ದೇವೆ. ಇಷ್ಟರ ನಡುವೆಯು ನಿನ್ನೆ ಕರ್ನಾಟಕ –ಕೇರಳ ಗಡಿ ಭಾಗದಲ್ಲಿ ಹಿಂದೂ ಕಾರ್ಯಕರ್ತ ಪ್ರವೀಣ್ ಹತ್ಯೆ ನಡೆದಿದೆ ಎಂದು (3ನೇ ಪುಟಕ್ಕೆ)

## ಬಿಎಸ್ಸೆನ್ನೆಲ್‌ಗೆ 1.64 ಲಕ್ಷ ಕೋಟಿ ರೂ. ಪ್ಯಾಕೇಜ್

ನವದೆಹಲಿ, ಜು. 27 - ಸರ್ಕಾರಿ ಸ್ವಾಮ್ಯದ ಬಿ.ಎಸ್.ಎನ್.ಎಲ್. ಪುನಶ್ಚೇತನಕ್ಕೆ ಕೇಂದ್ರ ಸಂಪುಟ 1.64 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್‌ಗೆ ಒಪ್ಪಿಗೆ ನೀಡಿದೆ ಎಂದು ಟೆಲಿಕಾಂ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಬಿ.ಎಸ್.ಎನ್.ಎಲ್. ಸೇವೆಗಳ ಉನ್ನತೀಕರಣಕ್ಕೆ ಹೊಸ ಬಂಡವಾಳ, ಸ್ಪೆಕ್ಟ್ರಮ್ ವಿತರಣೆ, ಅಥಾವೆ ಪತ್ರಿಕೆ ಮೇಲಿನ ಒತ್ತಡ ನಿವಾರಣೆ ಹಾಗೂ ಫೈಬರ್ ಜಾಲಕ್ಕೆ ಒತ್ತು ನೀಡುವ ಸಲುವಾಗಿ ಈ ಪ್ಯಾಕೇಜ್ ನೀಡಲಾಗಿದೆ.

ಸಂಪುಟ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಾ ವಿವರ ನೀಡಿರುವ ಸಚಿವರು, ಪ್ಯಾಕೇಜ್‌ನಲ್ಲಿ 43,964 ಕೋಟಿ ರೂ. ನಗದು ಇರಲಿದೆ. 1.2 ಲಕ್ಷ ಕೋಟಿ ರೂ.ಗಳದ್ದು ನಗದು ರಹಿತ ಅಂಶವಾಗಿರಲಿದೆ ಎಂದಿದ್ದಾರೆ.

**ಕೇಂದ್ರ ಸಂಪುಟ ಒಪ್ಪಿಗೆ**

ಬಿ.ಎಸ್.ಎನ್.ಎಲ್.ಗೆ 4ಜಿ ಸೇವೆಗೆ ಅಗತ್ಯ ಸ್ಪೆಕ್ಟ್ರಮ್ ಅನ್ನು ಆಡಳಿತಾತ್ಮಕ ಅನುಮೋದನೆ ಮೂಲಕ ನೀಡಲಾಗುವುದು. 44,993 ಕೋಟಿ ರೂ. ಮೌಲ್ಯದ ಸ್ಪೆಕ್ಟ್ರಮ್ ಅನ್ನು ಪಾಲುಗಾರಿಕೆ ಮೂಲಕ ನೀಡಲಾಗುವುದು.

ಮುಂದಿನ ನಾಲ್ಕು ವರ್ಷಗಳ ಅವಧಿಗೆ 4ಜಿ ತಂತ್ರಜ್ಞಾನ ಅಭಿವೃದ್ಧಿಗಾಗಿ 22,471 ಕೋಟಿ ರೂ. ನೀಡಲಾಗುವುದು.

ಗ್ರಾಮೀಣ ಭಾಗದಲ್ಲಿ ತಂತಿಯುತ ಟೆಲಿಕಾಂ ಸೇವೆ ಒದಗಿಸಿದ ಬಿ.ಎಸ್.ಎನ್.ಎಲ್.ಗೆ 13,789 ಕೋಟಿ ರೂ.ಗಳನ್ನು ನೀಡಲಾಗುವುದು ಎಂದವರು ತಿಳಿಸಿದ್ದಾರೆ.

ಮೂಲಭೂತ ಸೌಲಭ್ಯಗಳನ್ನು ಬಲಗೊಳಿಸುವ ಸಲುವಾಗಿ ಭಾರತ್ ನೆಟ್ ಹಾಗೂ ಬಿಬಿಎನ್‌ಎಲ್‌ಗಳನ್ನು ಬಿ.ಎಸ್.ಎನ್.ಎಲ್.ನಲ್ಲಿ ವಿಲೀನಗೊಳಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ.

ಭಾರತ್‌ನೆಟ್ ಜಾಲವು ರಾಷ್ಟ್ರೀಯ ಆಸ್ತಿಯಾಗಿ ಮುಂದುವರೆಯಲಿದೆ. ಇದು ಎಲ್ಲಾ ಟೆಲಿಕಾಂ ಸೇವಾದಾರರಿಗೆ ಪಕ್ಷಪಾತವಿಲ್ಲದೇ (2ನೇ ಪುಟಕ್ಕೆ)



## ಸಿದ್ದರಾಮಯ್ಯ ಅಮೃತ ಮಹೋತ್ಸವ ಮುಖಂಡರಿಂದ ಲೋಗೋ ಬಿಡುಗಡೆ

ದಾವಣಗೆರೆ, ಜು. 27- ಆಗಸ್ಟ್ 3 ರಂದು ನಡೆಯಲಿರುವ ಸಿದ್ದರಾಮಯ್ಯ ಅಮೃತ ಮಹೋತ್ಸವದ ಲೋಗೋವನ್ನು ನಗರದ ಶಾಮನೂರು ಅರಮನೆ ಮೈದಾನದಲ್ಲಿ ಕಾಂಗ್ರೆಸ್ ಮುಖಂಡರು ಬಿಡುಗಡೆ ಮಾಡಿದರು.

ಕಾಂಗ್ರೆಸ್‌ನ ಹಿರಿಯ ಮುಖಂಡರಾದ ಹೆಚ್.ಸಿ. ಮಹದೇವಪ್ಪ, ಬಿ.ಎಲ್. ಶಂಕರ್, ಹೆಚ್.ಎಂ. ರೇವಣ್ಣ ಲೋಗೋ ಅನಾವರಣ ಮಾಡಿದರು. ಲೋಗೋದಲ್ಲಿ ಸಿದ್ದರಾಮಯ್ಯ ಅವರ ದೊಡ್ಡ ಫೋಟೋ ಹಾಗೂ 2022 ಹಾಗೂ ಸಿದ್ದರಾಮಯ್ಯ ಹೆಸರು ಹೈಲೈಟ್ ಮಾಡಲಾಗಿದೆ.

ದಾವಣಗೆರೆ-ಹರಿಹರ ಮಧ್ಯ ಇರುವ ರಾಷ್ಟ್ರೀಯ ಹೆದ್ದಾರಿ 4ರ ಬಳಿಯ ಶಾಮನೂರು ಅರಮನೆ ಮೈದಾನದಲ್ಲಿ 50 ಎಕರೆ ಜಾಗದಲ್ಲಿ ಬೃಹತ್ ವೇದಿಕೆ ನಿರ್ಮಾಣ ಮಾಡಲಿದ್ದು, ವೇದಿಕೆಯ ಶೇ.50 ರಷ್ಟು ನಿರ್ಮಾಣ ಪೂರ್ಣಗೊಂಡಿದೆ.

ಅಮೃತ ಮಹೋತ್ಸವ ಸಮಿತಿ ನಾಯಕರಾದ ಮಾಜಿ ಸಚಿವರಾದ ಹೆಚ್.ಸಿ. ಮಹದೇವಪ್ಪ, ಹೆಚ್.ಎಂ. ರೇವಣ್ಣ, ಬಿ.ಎಲ್. (3ನೇ ಪುಟಕ್ಕೆ)

### ಶಾಲೆ : ಭಾನುವಾರದ ಬದಲು ಶುಕ್ರವಾರ ರಜೆ

ನವದಹೆಲಿ, ಜು. 27 – ಬಿಹಾರದ 37 ಸರ್ಕಾರಿ ಶಾಲೆಗಳಲ್ಲಿ ಭಾನುವಾರದ ಬದಲು ಶುಕ್ರವಾರ ರಜೆ ನೀಡುತ್ತಿರುವ ಬಗ್ಗೆ ಉತ್ತರಿಸುವಂತೆ ಮಕ್ಕಳ ಹಕ್ಕುಗಳ ರಾಷ್ಟ್ರೀಯ ಆಯೋಗ ತಿಳಿಸಿದೆ.

ಬಿಹಾರದಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿರುವ ಜಿಲ್ಲೆಗಳ 37 ಸರ್ಕಾರಿ ಶಾಲೆಗಳಲ್ಲಿ ಶುಕ್ರವಾರ ರಜೆ ನೀಡಲಾಗುತ್ತಿದೆ (2ನೇ ಪುಟಕ್ಕೆ)

### ಎಲ್ಲ ಪ್ರಶಸ್ತಿಗಳಿಗಾಗಿ ಒಂದೇ ವೆಬ್ ತಾಣ

ನವದೆಹಲಿ, ಜು. 27 – ಪದ್ಮ ಪ್ರಶಸ್ತಿಗಳೂ ಸೇರಿದಂತೆ ಸರ್ಕಾರ ನೀಡುವ ಎಲ್ಲ ಅಧಿಕೃತ ಪ್ರಶಸ್ತಿಗಳಿಗೆ ಶಿಫಾರಸ್ಸು ಮಾಡಲು ಕೇಂದ್ರ ಸರ್ಕಾರ ವೆಬ್ ತಾಣವೊಂದನ್ನು ಆರಂಭಿಸಿದೆ. awards.gov.in ಎಂಬ ವೆಬ್ ತಾಣದ ಮೂಲಕ ನಾಗರಿಕರು ಹಾಗೂ ಸಂಘಟನೆಗಳು ವಿವಿಧ ಪ್ರಶಸ್ತಿಗಳಿಗೆ ಹೆಸರುಗಳನ್ನು ಶಿಫಾರಸ್ಸು (2ನೇ ಪುಟಕ್ಕೆ)

## ಹಡಪದ ಅಪ್ಪಣ್ಣ ನಿಗಮ ಸ್ಥಾಪನೆಗೆ ಆಗ್ರಹ

### ಹಡಪದ ಅಪ್ಪಣ್ಣ ಜಯಂತಿಯಲ್ಲಿ ಶ್ರೀ ಅನ್ನದಾನ ಭಾರತಿ ಬಸವಪ್ರಿಯ ಸ್ವಾಮೀಜಿ



ದಾವಣಗೆರೆ, ಜು, 27- ಸರ್ಕಾರದ ನಿರ್ಲಕ್ಷ್ಯಗೆ ಒಳಗಾಗಿರುವ ಅತ್ಯಂತ ಹಿಂದುಳಿದ ಹಡಪದ ಸಮಾಜ ಸರ್ವಾಂಗೀಣ ಅಭಿವೃದ್ಧಿ ಹೊಂದಬೇಕಾದರೆ 'ಹಡಪದ ಅಪ್ಪಣ್ಣ ಅಭಿವೃದ್ಧಿ ನಿಗಮ' ಸ್ಥಾಪನೆ ಮಾಡುವಂತೆ ಶ್ರೀ ಅನ್ನದಾನ ಭಾರತಿ ಬಸವಪ್ರಿಯ ಹಡಪದ ಅಪ್ಪಣ್ಣ ಸ್ವಾಮೀಜಿ ಆಗ್ರಹಿಸಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ಹಮ್ಮಿಕೊಂಡಿದ್ದ ಶಿವಶರಣ ನಿಜಸುಖಿ ಹಡಪದ ಅಪ್ಪಣ್ಣ ಶರಣರ 888 ನೇ ಜಯಂತ್ಯುತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಹಡಪದ ಸಮುದಾಯ ಲಿಂಗಾಯತ ಪಂಗಡಕ್ಕೆ ಒಳಪಡುವುದರಿಂದ (ಪ್ರವರ್ಗ- 3 ಬಿ) ಸರ್ಕಾರದಿಂದ ಯಾವುದೇ ಸವಲತ್ತುಗಳು ಸಿಗದ ಕಾರಣ, ಹಿಂದುಳಿದ ಈ ಸಮಾಜಕ್ಕೆ 2 ಎ ಮೀಸಲಾತಿ ನೀಡುವ ಮೂಲಕ ಹಡಪದ ಸಮುದಾಯದ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ (2ನೇ ಪುಟಕ್ಕೆ)

### ವಿಶ್ವಕ್ಕೆ ಬೆಳಕು ನೀಡಿದ 12 ನೇ ಶತಮಾನ - ಪಂಡಿತಾರಾಧ್ಯ ಶ್ರೀ

ದಾವಣಗೆರೆ, ಜು. 27- ಹನ್ನೆರಡನೇ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿ ಕೇವಲ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರದೇ ಇಡೀ ವಿಶ್ವಕ್ಕೆ ಬೆಳಕು ನೀಡಿದ ಶತಮಾನವದು. ಅಂತಹ ಕ್ರಾಂತಿಕಾರಿ ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿದ್ದವರು ಹಡಪದ ಅಪ್ಪಣ್ಣ ಶರಣರು ಎಂದು ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ನಡೆದ ಶಿವಶರಣ ನಿಜಸುಖಿ ಹಡಪದ ಅಪ್ಪಣ್ಣ ಶರಣರ 888 ನೇ ಜಯಂತ್ಯುತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಇಂದಿಗೂ ಕೂಡ ಸಮಾಜದಲ್ಲಿ ಜಾತಿ ವ್ಯವಸ್ಥೆ (3ನೇ ಪುಟಕ್ಕೆ)


## ಹರಿಹರದ ನವರತ್ನ ಜ್ಯೂಯಲರ್ಸ್ ಮಾಲೀಕರಾದ ಆರ್.ಟಿ. ರಮಾಕಾಂತ್ (ರಾಮಚಂದ್ರ ರಾವ್) ನಿಧನ



ಹರಿಹರ ನಗರ ವಿದ್ಯಾನಗರದ 60 ಅಡಿ ರಸ್ತೆಯ ನಿವಾಸಿ
ನವರತ್ನ ಜ್ಯೂಯಲರ್ಸ್ ಮಾಲೀಕರಾದ

**ಆರ್.ಟಿ. ರಮಾಕಾಂತ್ (ರಾಮಚಂದ್ರ ರಾವ್)**

ಇವರು ದಿನಾಂಕ 27.7.2022ರ ಬುಧವಾರ ಮಧ್ಯಾಹ್ನ 3.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು.
ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.7.2022ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಹರಿಹರದ ವಿಶ್ರಾಮ್ ದಾಲ್ಮಿಯಾ ಘಾಟ್‌ನಲ್ಲಿ ನೆರವೇರಿಸಲಾಗುವುದು.

*ಇಂತಿ ದುಃಖತಪ್ತರು :*

ಶ್ರೀಮತಿ ಗೀತಾ ರಾಮಚಂದ್ರರಾವ್ ತೇಲ್ಕರ್
ಶ್ರೀಮತಿ ಉಷಾ, ಶ್ರೀ ವೆಂಕಟೇಶ್ ತೇಲ್ಕರ್
ಶ್ರೀಮತಿ ಮುಕ್ತಾ, ಶ್ರೀ ಕೃಷ್ಣಮೂರ್ತಿ ತೇಲ್ಕರ್
ಶ್ರೀಮತಿ ಅರ್ಪಣಾ, ಶ್ರೀ ಶಶಿಕಾಂತ್ ತೇಲ್ಕರ್
ಶ್ರೀಮತಿ ಶಿಲ್ಪಾ, ಶ್ರೀ ಚಂದ್ರಕಾಂತ್ ತೇಲ್ಕರ್
ಹಾಗೂ ಬಂಧು-ಮಿತ್ರರು. ಮೊ : 9845352408

# ಕಮೀಷನ್ ಆರೋಪ ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ

ಜಗಳೂರು, ಜು. 27- ನನ್ನ ಬಗ್ಗೆ ಹಗುರವಾಗಿ ಮತ್ತು ಏಕವಚನದಲ್ಲಿ ವೈಯಕ್ತಿಕವಾಗಿ ತೇಜೋವಧೆ ಮಾಡುವ ರೀತಿಯಲ್ಲಿ ಮಾತನಾಡಿದರೆ ಸಹಿಸುವುದಿಲ್ಲ. ನಾನೂ ಅವರ ಬಗ್ಗೆ ಆಡಿಯೋ, ವಿಡಿಯೋ ಸಮೇತ ತೇಜೋವಧೆ ಮಾಡಬಲ್ಲೆ ಎಂದು ಶಾಸಕ ಎಸ್.ವಿ. ರಾಮಚಂದ್ರ ಮಾಜಿ ಶಾಸಕರಿಗೆ ತಿರುಗೇಟು ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇಂದು ಬಿಜೆಪಿಯ ಪ್ರಮುಖರೊಂದಿಗೆ ಪತ್ರಿಕಾ ಗೋಷ್ಠಿ ನಡೆಸಿದ ಶಾಸಕರು, ಈಚೆಗೆ ಅಣಬೂರು ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡರ ಹಾಗೂ ಮಾಜಿ ಶಾಸಕರ ಹೇಳಿಕೆಯನ್ನು ಖಂಡಿಸಿದರು.

ನಾನು ಕ್ಷೇತ್ರದ ಹೊರಗಿನವನು ಎಂದು ಹೇಳುವ ಮಾಜಿ ಶಾಸಕರಿಗೆ, ನಾನು 1998 ರಿಂದಲೂ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ. ಜಿಲ್ಲಾ ಪಂಚಾಯ್ತಿ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದೇನೆ. ಆಗ ಮಾಜಿ ಶಾಸಕರು ಇನ್ನೂ ರೇಷ್ಮೆ ಇಲಾಖೆಯಲ್ಲಿ ಗುಮಾಸ್ತರಾಗಿದ್ದರು. ಕ್ಷೇತ್ರದ ಜನತೆ ನನ್ನನ್ನು ಮೂರು ಬಾರಿ ಗೆಲ್ಲಿಸಿದ್ದಾರೆ. ನಾನು ಕಾಂಗ್ರೆಸ್ ಬಿಡದಿದ್ದರೆ ರಾಜೇಶ್ ಅವರಿಗೆ ರಾಜಕೀಯ ಭವಿಷ್ಯವೇ



ಇರುತ್ತಿರಲಿಲ್ಲ. ನನ್ನ ರಾಜಕೀಯ ಗುರುಗಳು ಜೆ.ಹೆಚ್. ಪಟೇಲರು, ಬಂಗಾರಪ್ಪ ಮತ್ತು ಶಾಮನೂರು ಶಿವಶಂಕರಪ್ಪ ಅವರಂತಹ ಹಿರಿಯ ರಾಜಕಾರಣಿಗಳ ಬಳಿ ನಾನು ಕೆಲಸ ಮಾಡಿದ್ದೇನೆ. ಜನರ ತೀರ್ಪಿಗೆ ತಲೆ ಬಾಗುತ್ತೇನೆ. ಮಾಜಿ ಶಾಸಕರು ಸುಳ್ಳು ಹೇಳಿ ಜನರ ದಾರಿ ತಪ್ಪಿಸುವ ಕೆಲಸ ಮಾಡಬಾರದು.

ಕ್ಷೇತ್ರದ ಕಾಮಗಾರಿಗಳಲ್ಲಿ ಪರ್ಸೆಂಟೇಜ್ ಪಡೆದಿರುವುದು ರುಜುವಾತುಪಡಿಸಿದರೆ, ರಾಜಕೀಯ ನಿವೃತ್ತಿಯಾಗಲು ಸಿದ್ಧ. ಕೇವಲ ಬಾಯಿ ಪ್ರಚಾರಕ್ಕೆ ಮಾತನಾಡುವುದನ್ನು ನಾನು ಸಹಿಸುವುದಿಲ್ಲ. ಅಭಿವೃದ್ಧಿಯ ವಿಷಯದಲ್ಲಿ ನನ್ನ ಅಧಿಕಾರ ಅವಧಿಯಲ್ಲಿ ಆಗಿರುವ ಕೆಲಸಗಳ ಬಗ್ಗೆ ಜನರಿಗೆ ತಿಳಿದಿದೆ.ಜನರನ್ನು ತಪ್ಪುದಾರಿಗೆಳೆಯಬಾರದು ಎಂದರು.

ಭದ್ರಾ ಮೇಲ್ದಂಡೆ ಯೋಜನೆ ಆರಂಭದಲ್ಲಿ 1860 ಎಕರೆ ನೀರಾವರಿಗೆ ಸೀಮಿತವಾಗಿತ್ತು. ಮಾಜಿ ಶಾಸಕರು ಅವರದೇ ಸರ್ಕಾರ ಇದ್ದರೂ ಸಹ ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಯಾವುದೇ ಕೆಲಸ ಮಾಡಲಿಲ್ಲ. ನಾನು ಅಧಿಕಾರಕ್ಕೆ ಬಂದ ಮೇಲೆ ಯೋಜನೆ ಜಾರಿಗೆ ಶ್ರಮಿಸಿದ್ದೇನೆ. ಅನುದಾನವು ಬಿಡುಗಡೆಯಾಗಿದ್ದು, ಶೀಘ್ರವೇ ಕಾಮಗಾರಿ ಆರಂಭವಾಗಲಿದೆ.ಇದು ರಾಷ್ಟ್ರೀಯ ಯೋಜನೆ ಆಗಿರುವುದರಿಂದ ಶೀಘ್ರ ಪೂರ್ಣಗೊಂಡು ಕ್ಷೇತ್ರದಲ್ಲಿ ನೀರಾವರಿ

> ಮಾಜಿ ಶಾಸಕರು ತಾವು ಗಾಜಿನ ಮನೆಯಲ್ಲಿದ್ದು ಬೇರೆಯವರ ಮನೆಗೆ ಕಲ್ಲು ಹೊಡೆಯುವುದನ್ನು ನಿಲ್ಲಿಸಬೇಕು. ನಮಗೂ ಇನ್ನೊಬ್ಬರ ಬಗ್ಗೆ ತೇಜೋವಧೆ ಮಾಡುವುದು ಗೊತ್ತಿದೆ. ಆದರೆ ನಾನು ಸಭ್ಯತೆಯನ್ನು ಮೀರುವುದಿಲ್ಲ.
>
> **- ಶಾಸಕ ರಾಮಚಂದ್ರ**

ಸೌಲಭ್ಯ ಆಗಲಿದೆ. 57 ಕೆರೆ ತುಂಬಿಸುವ ಯೋಜನೆ ನಾನು ಮಾಡಿದ್ದೆ ಎಂದು ನಾನು ಎಲ್ಲೂ ಹೇಳಿಲ್ಲ. ಇದು ಸಿರಿಗೆರೆ ಶ್ರೀಗಳಿಂದ ಯಶಸ್ವಿಯಾಗಿ ಜಾರಿಯಾಗಿದೆ. ಅವರು ಹೇಳಿದಂತೆ ನಾನು ಕೆಲಸ ನಿರ್ವಹಿಸಿದ್ದೇನೆ.

ವಸತಿ ಯೋಜನೆಯ ಬಗ್ಗೆ ಕಾಂಗ್ರೆಸ್ ಮುಖಂಡರು ಜನರಿಗೆ ತಪ್ಪು ಮಾಹಿತಿಯನ್ನು ನೀಡುತ್ತಿದ್ದಾರೆ. ಕ್ಷೇತ್ರದಲ್ಲಿ ಕೊರೊನಾ ಪ್ರಯುಕ್ತ 2 ವರ್ಷ ಮನೆಗಳ ಮಂಜೂರಾತಿ ವಿಳಂಬವಾಗಿತ್ತು. ನನ್ನ ಅಧಿಕಾರವಧಿಯಲ್ಲಿ 2008ನೇ ಸಾಲಿನಿಂದ 2013ನೇ ಸಾಲಿನವರೆಗೆ ಒಟ್ಟು 9277 ಮನೆಗಳು ಮಂಜೂರಾಗಿದ್ದು, 7816 ಮನೆಗಳು ಪೂರ್ಣಗೊಂಡಿವೆ ಹಾಗೂ 29.68 ಕೋಟಿ ರೂ. ಸಹಾಯಧನ ಇಲ್ಲಿಯವರೆಗೂ ಫಲಾನುಭವಿಗಳ ಖಾತೆಗೆ ನೇರವಾಗಿ ಬಿಡುಗಡೆಯಾಗಿರುತ್ತದೆ ಎಂದರು.

ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಜಿ.ಪಂ. ಮಾಜಿ ಸದಸ್ಯ ಹೆಚ್. ನಾಗರಾಜ್ ಮಾತನಾಡಿ, ಕಾಂಗ್ರೆಸ್ ಶಾಸಕರು ಅಣಬೂರು ಕಾಂಗ್ರೆಸ್ ಸಭೆಯಲ್ಲಿ ಶಾಸಕರ ಬಗ್ಗೆ ಅವಹೇಳನಕಾರಿ ಮಾತನಾಡಿರುವುದನ್ನು ಕಾರ್ಯಕರ್ತರು ಸಹಿಸುವುದಿಲ್ಲ, ಸುಮ್ಮನಿರುವುದಿಲ್ಲ. ಅವರ ವಿರುದ್ಧ ಬೀದಿಗಿಳಿದು ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ವೇಣುಗೋಪಾಲ ರೆಡ್ಡಿ, ತಾಲ್ಲೂಕು ಬಿಜೆಪಿ ಓಬಿಸಿ ಅಧ್ಯಕ್ಷ ಇಂದ್ರೇಶ್, ಜಿಲ್ಲಾ ದಿಶಾ ಸಮಿತಿಯ ಸದಸ್ಯ ವಕೀಲ ಎನ್.ಜೆ. ತಿಪ್ಪೇಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ರಘುರಾಮ್ ರೆಡ್ಡಿ, ಜಿಪಂ ಮಾಜಿ ಸದಸ್ಯ ಎಸ್.ಕೆ. ಮಂಜುನಾಥ್ ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಡಲ ಅಧ್ಯಕ್ಷ ಎಚ್.ಸಿ. ಮಹೇಶ್, ಜಿಲ್ಲಾ ಉಪಾಧ್ಯಕ್ಷ ಡಿ.ವಿ. ನಾಗಪ್ಪ, ಬಿಜೆಪಿ ಹಿರಿಯ ಮುಖಂಡರಾದ ಕೆ.ಬಿ. ಸಿದ್ದೇಶ್, ಬಿದರಕೆರೆ ರವಿ, ಜೆ.ವಿ. ನಾಗರಾಜ್, ಎಸ್. ಸಿದ್ದಪ್ಪ, ಬಿಸ್ತುವಳ್ಳಿ ಬಾಬು, ದ್ಯಾಮನಗೌಡ, ಕೆಂಚನಗೌಡ, ಮಹಾದೇವಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಹೊಳೆಸಿರಿಗೆರೆ : ಲಸಿಕೆ ಹಾಕಿಸಿಕೊಳ್ಳುವಂತೆ ಜಾಗೃತಿ



ಮಲೇಬೆನ್ನೂರು, ಜು.27- ಹೊಳೆಸಿರಿಗೆರೆ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ 18 ವರ್ಷ ಮೇಲ್ಪಟ್ಟವರಿಗೆ 1ನೇ ಅಥವಾ 2ನೇ ಮತ್ತು 3ನೇ ಕೋವಿಡ್ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸಲಾಯಿತು. ಈ ವೇಳೆ ಅನೇಕರು ಲಸಿಕೆ ಹಾಕಿಸಿಕೊಂಡರೆಂದು ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ತಿಳಿಸಿದರು.

2ನೇ ಲಸಿಕೆ ಪಡೆದಿರುವವರು 6 ತಿಂಗಳ ನಂತರ 3ನೇ ಲಸಿಕೆ ಹಾಕಿಸಿಕೊಳ್ಳುವಂತೆ ತಿಳಿಸಲಾಯಿತು.

ಆರೋಗ್ಯ ಇಲಾಖೆಯ ಪ್ರಕಾಶ್‌ನಾಯ್ಕ, ಆಶಾರಾಣಿ, ಆಶಾ ಕಾರ್ಯಕರ್ತರಾದ ಮಾಲಾಶ್ರೀ, ನೀಲಾಂಬಿಕಾ, ಕರಿಬಸಮ್ಮ, ಶಶಿಕಲಾ, ಕಸ್ತೂರಿ ಬಾಯಿ, ಪುಷ್ಪಾವತಿ ಮತ್ತಿತರರು ಈ ವೇಳೆ ಹಾಜರಿದ್ದರು.

## ಎಲ್ಲ ಪ್ರಶಸ್ತಿಗಳಿಗಾಗಿ ಒಂದೇ ವೆಬ್ ತಾಣ

**(1ನೇ ಪುಟದಿಂದ)** ಮಾಡಬಹುದು. ಹಲವಾರು ಸಚಿವಾಲಯಗಳು, ಇಲಾಖೆಗಳು ಹಾಗೂ ಸಂಸ್ಥೆಗಳು ನೀಡುವ ಎಲ್ಲ ಪ್ರಶಸ್ತಿಗಳನ್ನು ಈ ಪೋರ್ಟಲ್‌ಗೆ ತರಲಾಗಿದೆ. ಪಾರದರ್ಶಕತೆ ಹಾಗೂ ಸಾರ್ವಜನಿಕ ಸಹಭಾಗಿತ್ವದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಂಡಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

# ಹಡಪದ ಅಪ್ಪಣ್ಣ ನಿಗಮ ಸ್ಥಾಪನೆಗೆ ಆಗ್ರಹ

**(1ನೇ ಪುಟದಿಂದ)** ಸರ್ಕಾರ ಚಿಂತನೆ ಮಾಡಬೇಕಾಗಿದೆ ಎಂದರು.

12 ನೇ ಶತಮಾನದಲ್ಲಿಯೇ ಹಡಪದ ಸಮಾಜಕ್ಕೆ ಲಿಂಗದೀಕ್ಷೆ ಕೊಟ್ಟರು ಸರಿ, ಆದರೆ ಇದುವರೆಗೂ ಯಾರೂ ಕೂಡ ಸಮಾಜದ ಪ್ರಗತಿಯತ್ತ ಚಿತ್ತ ಹರಿಸಿಲ್ಲ. 900 ವರ್ಷಗಳು ಕಳೆದರೂ ಸಹ ಕೇವಲ ಲಿಂಗ ತತ್ವ ಹೇಳುತ್ತಾರೆ. ಲಿಂಗಾಯತರು ಎನ್ನುವ ದೃಷ್ಟಿಯಿಂದಲೇ ನೋಡುತ್ತಾರೆ. ಆದರೆ ಲಿಂಗಾಯತ ಎಂದು ಗುರುತಿಸಿರುವುದರಿಂದ ಸಮುದಾಯದ ಮಕ್ಕಳಿಗೆ ಸರ್ಕಾರದಿಂದ ಯಾವುದೇ ಸವಲತ್ತುಗಳು ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಡಪದ ಅಪ್ಪಣ್ಣ ಶರಣರು ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ಆಪ್ತಕಾರ್ಯದರ್ಶಿಯಾಗಿ ಶರಣ ಚಳವಳಿಯಲ್ಲಿ ಧುಮುಕಿದವರು. ಬಸವಣ್ಣ ಮತ್ತು ಅಲ್ಲಮಪ್ರಭು ಅವರ ಜೊತೆಗೂಡಿ ಕಲ್ಯಾಣ ಕ್ರಾಂತಿಯಲ್ಲಿ ಅಸಮಾನತೆ ತೊಡೆದು ಹಾಕುವಲ್ಲಿ ಪ್ರಾಣ ಸೇವಕರಾಗಿ ಅವಿರತ ಶ್ರಮಿಸಿದವರು ಹಡಪದ ಅಪ್ಪಣ್ಣ ಶರಣರು ಎಂದು ಬಣ್ಣಿಸಿದರು.

ಅಸಂಘಟಿತ ಹಡಪದ ಸಮಾಜವನ್ನು ಸರ್ಕಾರ ಕಡೆಗಣಿಸಿದೆ. ಹಡಪದ ಅಪ್ಪಣ್ಣ ಅಭಿವೃದ್ಧಿ ನಿಗಮ ಸ್ಥಾಪಿಸುವುದು ಅವಶ್ಯವಿದೆ ಎಂದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಹಡಪದ ಸಮಾಜ ಸ್ಥಿತಿವಂತ ಸಮಾಜವಲ್ಲ. ಹಿಂದುಳಿದ ಈ ಸಮಾಜವನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಸರ್ಕಾರ ಸವಲತ್ತು ನೀಡಬೇಕಾಗಿದೆ ಎಂದು ಹೇಳಿದರು.

ಕೇವಲ ಪ್ರಬಲ ಸಮಾಜಗಳನ್ನು ಮಾತ್ರ ಪರಿಗಣಿಸಿದರೆ ಸಾಲದು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದ ಹಡಪದ ಸಮಾಜಕ್ಕೆ ಸಿಗಬೇಕಾದ ಸಾಮಾಜಿಕ ನ್ಯಾಯ ಸಿಗುತ್ತಿಲ್ಲ. ಇದಕ್ಕೆ ಸಮಾಜ ಸಂಘಟಿತರಾಗದೇ ಇರುವುದು ಕಾರಣವಾಗಿದೆ ಎಂದರು.

ಹಡಪದ ಅಪ್ಪಣ್ಣ ಸ್ವಾಮೀಜಿಯವರು ಸಮಾಜ ಒಗ್ಗೂಡಿಸುವಲ್ಲಿ ಇಡೀ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದಾರೆ. ಸರ್ಕಾರ ಕೇವಲ ಓಟ್ ಬ್ಯಾಂಕ್ ಮಾಡಿಕೊಳ್ಳಲು ಮತ್ತು ಚುನಾವಣೆ ಹತ್ತಿರ ಬರುತ್ತಿರುವುದರಿಂದ ವಿವಿಧ ಸಮಾಜಗಳ ಮಹನೀಯರ ಜಯಂತಿಯನ್ನು ಆಚರಿಸುತ್ತಿದೆ. ಅದರ ಬದಲು ಸಮಾಜವನ್ನು ಗಮನಿಸಿ, ಅವರಿಗೆ ಸವಲತ್ತುಗಳನ್ನು ನೀಡಬೇಕೆಂದು ಒತ್ತಾಯಿಸಿದರು.

ದಾವಣಗೆರೆ ಬಸವ ಬಳಗದ ಶ್ರೀ ವಿ. ಸಿದ್ಧರಾಮ ಶರಣರು, ಮಲ್ಲೇದೇವರಪುರದ ಶ್ರೀ ಗುರು ಮುಕುಂದೂರು ವಿರಕ್ತಮಠದ ಡಾ. ಮಹಾಂತ ಬಸವಲಿಂಗ ಸ್ವಾಮಿಗಳು, ಅಖಿಲ ಕರ್ನಾಟಕ ಹಡಪದ ಸಮಾಜದ ರಾಜ್ಯಾಧ್ಯಕ್ಷ ಸಿದ್ದಪ್ಪ ಮ. ಹಡಪದ, ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್ ಮಾತನಾಡಿದರು.

ಸಮಾಜದ ಜಿಲ್ಲಾಧ್ಯಕ್ಷ ಶಶಿಧರ್ ಬಸಾಪುರ ಅಧ್ಯಕ್ಷತೆ ವಹಿಸಿದ್ದರು. ಸಮಾಜದ ಮುಖಂಡರಾದ ಹೆಚ್.ಎಂ. ಕರಿಸಿದ್ದಪ್ಪ, ವಿಜಯಕುಮಾರ್ ಜಗಳೂರು, ಹಾಲೇಶ್ ನ್ಯಾಮತಿ, ಹಾಲೇಶ್ ಹರಿಹರ, ಮಂಜಪ್ಪ ಬೇಳೂರು, ಹೇಮಂತರಾಜ್, ಚಿದಾನಂದ ಬಸರಕೋಡು, ಚಿದಾನಂದ ಹಡಪದ, ಬಸವರಾಜ್ ಶ್ಯಾಗಲೆ, ಪ್ರಸಾದ ದಾಸೋಹಿ ಹೆಚ್.ಆರ್. ಸಿದ್ದೇಶ್ ಮತ್ತಿತರರಿದ್ದರು.

ಬಸವ ಕಲಾ ಲೋಕದ ಕಲಾವಿದರು ವಚನ ಗೀತೆ ಹಾಡಿದರು. ಸಾಹಿತಿ ಎನ್.ಜೆ. ಶಿವಕುಮಾರ್ ನಿರೂಪಿಸಿದರು. ಕರಿಸಿದ್ದಪ್ಪ ಸ್ವಾಗತಿಸಿದರು.

# ಹರಿಹರ ; ವಿದ್ಯಾರ್ಥಿಗಳು ಸದೃಢರಾಗಲು ಮೊಟ್ಟೆ, ಬಾಳೆಹಣ್ಣು

ಹರಿಹರ, ಜು. 27- ವಿದ್ಯಾರ್ಥಿಗಳು ಸದೃಢ ಆರೋಗ್ಯದಿಂದ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಸಹಕಾರಿಯಾಗಲಿ ಎಂದು ಸರ್ಕಾರ ಮಕ್ಕಳಿಗೆ ಬಾಳೆಹಣ್ಣು, ಮೊಟ್ಟೆ, ಶೇಂಗಾ ಚಿಕ್ಕಿ ನೀಡುತ್ತಿದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದ್ದಾರೆ.



ನಗರದ ಶಿಕ್ಷಣ ಇಲಾಖೆಯ ಕಚೇರಿಯ ಮುಂಭಾಗದಲ್ಲಿ, ಶಿಕ್ಷಣ ಇಲಾಖೆ ವತಿಯಿಂದ ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ ಯೋಜನೆ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಉಪಹಾರದೊಂದಿಗೆ ಬಾಳೆಹಣ್ಣು, ಮೊಟ್ಟೆ, ಶೇಂಗಾ ಚಿಕ್ಕಿ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಈ ಯೋಜನೆ ಸದುಪಯೋಗ ಪಡಿಸಿಕೊಂಡು ತಮ್ಮ ಮುಂದಿನ ದಿನಗಳಲ್ಲಿ ಉತ್ತಮ ರೀತಿಯಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಶಾಸಕರು ಹೇಳಿದರು.

ತಹಶೀಲ್ದಾರ್ ಎಂ. ಬಿ. ಅಶ್ವತ್ಥ್ ಮಾತನಾಡಿ, ತಮ್ಮ ಬಾಲ್ಯದ ದಿನಗಳಲ್ಲಿ ಸೌಲಭ್ಯಗಳು ಕಡಿಮೆ ಇದ್ದವು. ಇತ್ತೀಚೆಗೆ ಸರ್ಕಾರ ಶಿಕ್ಷಣಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಸವಲತ್ತು ನೀಡುತ್ತಿದೆ ಎಂದರು.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪುಸ್ತಕ, ಬಟ್ಟೆ, ಶೂ ಜೊತೆಗೆ ಬಾಳೆಹಣ್ಣು, ಮೊಟ್ಟೆ, ಶೇಂಗಾ ಚಿಕ್ಕಿ ನೀಡುತ್ತಿದೆ ಎಂದವರು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ, ಮಾತನಾಡಿ 6 ರಿಂದ 15 ನೇ ವಯಸ್ಸಿನ ಮಕ್ಕಳಲ್ಲಿ ಅಪೌಷ್ಟಿಕತೆ, ರಕ್ತಹೀನತೆ, ಬಹು ಪೌಷ್ಟಿಕಾಂಶದ ನ್ಯೂನತೆ ಅಧಿಕವಾಗಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಇದರ ನಿವಾರಣೆಗಾಗಿ ತಾಲ್ಲೂಕಿನ ಖಾಸಗಿ ಮತ್ತು ಅನುದಾನಿತ ಶಾಲೆಯ 21 ಸಾವಿರ ಮಕ್ಕಳಿಗೆ ಪೂರಕ ಪೌಷ್ಟಿಕಾಂಶವುಳ್ಳ ಆಹಾರವನ್ನು ಮಧ್ಯಾಹ್ನದ ಬಿಸಿಯೂಟ ದೊಂದಿಗೆ ಒದಗಿಸಲು ತೀರ್ಮಾನಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಶಾಹೀನಾಬಾನು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್, ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ದುರಗಪ್ಪ, ದಾದಾಪೀರ್, ಶಿಕ್ಷಕರಾದ ಬಿ.ಬಿ. ರೇವಣ್ಣನಾಯ್ಕ್, ಚಂದ್ರಪ್ಪ ದೊಗ್ಗಳ್ಳಿ, ಈಶಪ್ಪ ಬೂದಿಹಾಳ, ಧನ್ಯಕುಮಾರ್, ಶರಣ್ ಕುಮಾರ್ ಹೆಗಡೆ, ಜಯ್ಯಣ್ಣ, ಮಂಜಪ್ಪ, ಪುಷ್ಪ ಪ್ರಸಾದ್, ಮಂಜುಳಾ, ವಿಜಯ ಮಹಾಂತೇಶ್, ಶ್ರೀನಿವಾಸ್, ಕಾಂಗ್ರೆಸ್ ಮುಖಂಡ ಕುಣೆಬೆಳಕೆರೆ ದೇವೇಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಬಿಜೆಪಿ ಯುವ ಮೋರ್ಚಾ ಸದಸ್ಯನ ಹತ್ಯೆ

**(1ನೇ ಪುಟದಿಂದ)** ಪುತ್ತೂರಿನಿಂದ ಮಂಗಳೂರಿಗೆ ತೆರಳುತ್ತಿದ್ದ ಸರ್ಕಾರಿ ಬಸ್ ಒಂದಕ್ಕೆ ಕಲ್ಲು ತೂರಲಾಗಿದೆ. ನಂತರ ಸ್ವಲ್ಪ ಕಾಲ ಬಸ್ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಬೆಳ್ಳಾರೆಯಲ್ಲಿ ಪ್ರತಿಭಟನೆ ವೇಳೆ ಕಲ್ಲು ತೂರಾಟ ನಡೆದಿದೆ. ಜನರನ್ನು ಚೆದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

**ಐದು ತಂಡ :** ಹಂತಕರು ಕೇರಳ ನೋಂದಣಿ ಇರುವ ವಾಹನದಲ್ಲಿ ಬಂದು ಹತ್ಯೆ ಮಾಡಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಹಂತರ ಪತ್ತೆಗೆ 5 ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿದೆ. ಐದು ತಂಡಗಳ ಪೈಕಿ ಮೂರು ತಂಡಗಳನ್ನು ಕ್ರಮವಾಗಿ ಕೇರಳ ಮತ್ತು ಮಡಿಕೇರಿ ಮತ್ತು ಕರ್ನಾಟಕದ ಹಾಸನಕ್ಕೆ ಕಳುಹಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ್ ಸೋನಾಯ್ ಮಾಹಿತಿ ನೀಡಿದ್ದಾರೆ.

**ಕಟೀಲ್ ಕಾರಿಗೆ ಮುತ್ತಿಗೆ :** ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಬೆಳ್ಳಾರೆ ಗ್ರಾಮಕ್ಕೆ ಭೇಟಿ ನೀಡಿ ಮೃತ ಪ್ರವೀಣ್ ನೆಟ್ಟಾರು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಲು ಯತ್ನಿಸಿದ್ದರು. ಈ ವೇಳೆ ಹಿಂದೂ ಕಾರ್ಯಕರ್ತರು ನಳಿನ್ ಕಾರಿಗೆ ಮುತ್ತಿಗೆ ಹಾಕಿದರು. ಆಕ್ರೋಶಗೊಂಡ ಕಾರ್ಯಕರ್ತರು ಕಟೀಲ್ ಕಾರನ್ನು ಪಲ್ಟಿ ಮಾಡಲು ಯತ್ನಿಸಿದ್ದರು. ಆದರೆ, ಅದು ಸಾಧ್ಯವಾಗದೆ ಟೈರ್‌ಗಳಿಂದ ಗಾಳಿ ಹೊರಬಿಟ್ಟರು.

ಪರಿಸ್ಥಿತಿ ಕೈಮೀರುತ್ತಿದೆ ಎಂದು ತಿಳಿದ ಪೊಲೀಸರು ಲಾಠಿ ಚಾರ್ಜ್ ಮಾಡಿ ಗುಂಪು ಚದುರಿಸಿದರು. ಪೊಲೀಸ್ ಭದ್ರತೆಯಲ್ಲಿ ನಳಿನ್ ಅಲ್ಲಿಂದ ತೆರಳಿದರು

ಕೆಲ ತಿಂಗಳ ಹಿಂದಷ್ಟೇ ಶಿವಮೊಗ್ಗದಲ್ಲಿ ಭಜರಂಗ ದಳದ ಕಾರ್ಯಕರ್ತ ಹರ್ಷ ಹತ್ಯೆ ಮಾಡಲಾಗಿತ್ತು.

## ಬಿಎಸ್ಸೆನ್ನೆಲ್‌ಗೆ 1.64 ಲಕ್ಷ ಕೋಟಿ ರೂ.

**(1ನೇ ಪುಟದಿಂದ)** ಲಭ್ಯವಾಗಲಿದೆ.

4ಜಿ ಮೊಬೈಲ್ ಸೇವೆಯನ್ನು ದೇಶದ ಎಲ್ಲ ಹಳ್ಳಿಗಳಿಗೆ 26,316 ಕೋಟಿ ರೂ.ಗಳಿಗೆ ಒದಗಿಸುವ ಯೋಜನೆಗೂ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ದುರ್ಗಮ ಪ್ರದೇಶದಲ್ಲಿರುವ 24,680 ಹಳ್ಳಿಗಳಿಗೆ ಇದುವರೆಗೂ 4ಜಿ ಮೊಬೈಲ್ ಸೇವೆ ದೊರೆತಿಲ್ಲ.

## ಭಾನುವಾರದ ಬದಲು ಶುಕ್ರವಾರ ರಜೆ

**(1ನೇ ಪುಟದಿಂದ)** ಎಂದು ಮಾಧ್ಯಮಗಳು ವರದಿ ಮಾಡಿದ್ದವು.

ಈ ಬಗ್ಗೆ ಬಿಹಾರದ ಮುಖ್ಯ ಕಾರ್ಯದರ್ಶಿ ಅಮೀರ್ ಸುಭಾನಿ ಅವರಿಗೆ ಪತ್ರ ಬರೆದಿರುವ ಮಕ್ಕಳ ಹಕ್ಕುಗಳ ರಾಷ್ಟ್ರೀಯ ಆಯೋಗದ ಅಧ್ಯಕ್ಷ ಪ್ರಿಯಾಂಕ್ ಕಣುಂಗೊ, ಹತ್ತು ದಿನಗಳಲ್ಲಿ ವರದಿ ಸಲ್ಲಿಸುವಂತೆ ತಿಳಿಸಿದ್ದಾರೆ.

# ಮಲೇಬೆನ್ನೂರು : ವಿವಿಧ ಶಾಲೆಗಳಲ್ಲಿ ಮೊಟ್ಟೆ, ಬಾಳೆಹಣ್ಣು, ಶೇಂಗಾ ಚಿಕ್ಕಿ ವಿತರಣೆ



ಮಲೇಬೆನ್ನೂರು, ಜು.27- ಶಿಕ್ಷಣ ಇಲಾಖೆಯ ನಿರ್ದೇಶನದಂತೆ ಬುಧವಾರ ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಹಳ್ಳಿಗಳ ವಿದ್ಯಾರ್ಥಿಗಳಿಗೆ ಮೊಟ್ಟೆ, ಬಾಳೆಹಣ್ಣು ಮತ್ತು ಶೇಂಗಾ ಚಿಕ್ಕಿ ವಿತರಿಸಲಾಯಿತು.

ಪಟ್ಟಣದ ಎಸ್‌ಬಿಕೆಎಂ ಶಾಲೆಯಲ್ಲಿ ಪುರಸಭೆ ಸದಸ್ಯೆ ಶ್ರೀಮತಿ ವಿಜಯಲಕ್ಷ್ಮಿ, ಕೆ.ಪಿ ಗಂಗಾಧರ್ ಅವರು ಮಕ್ಕಳಿಗೆ ಮೊಟ್ಟೆ, ಹಣ್ಣು ನೀಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹೆಚ್.ಜಿ ಚಂದ್ರಶೇಖರ್, ನಿರ್ದೇಶಕರಾದ ಎಂ. ಆರ್. ಮಾರಪ್ಪ, ಹೆಚ್.ಎಸ್. ವೀರಭದ್ರಯ್ಯ, ಎಸ್‌ಡಿಎಂಸಿ ಅಧ್ಯಕ್ಷೆ ಶ್ರೀಮತಿ ಮಹಾದೇವಿ ಕೆ. ರಜಪೂತ್ ಸೇರಿದಂತೆ ಎಸ್‌ಡಿಎಂಸಿ ಸದಸ್ಯರು ಹಾಗೂ ಶಿಕ್ಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಅವರು, ಮೊಟ್ಟೆ, ಹಣ್ಣು, ಶೇಂಗಾ ಚಿಕ್ಕಿ ಮೂರರಲ್ಲಿ ಮಗು ಕೇಳಿದ್ದನ್ನು ನೀಡುವಂತೆ ಶಿಕ್ಷಣ ಇಲಾಖೆಯ ಆದೇಶವಾಗಿದೆ. ಆ ಪ್ರಕಾರ ಎಲ್ಲಾ ಶಾಲೆಗಳಲ್ಲಿ ಇದೇ ರೀತಿ ಮಾಡಲಾಗುತ್ತದೆ ಎಂದರು.

ಇಲ್ಲಿನ ಪಿಡಬ್ಲ್ಯೂಡಿ ಕಾಲೋನಿಯ ಸ.ಹಿ.ಪ್ರಾ ಶಾಲೆಯಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಅವರು ವಿದ್ಯಾರ್ಥಿಗಳಿಗೆ ಮೊಟ್ಟೆ, ಹಣ್ಣು, ಶೇಂಗಾ ಚಿಕ್ಕಿ ವಿತರಣೆ ಮಾಡಿದರು.

ಎಇಓ ಹರೀಶ್ ನೋಟಗಾರ್, ಅಶೋಕ್, ಸಿಆರ್‌ಪಿ ಚನ್ನಕೇಶವ, ಮುಖ್ಯಶಿಕ್ಷಕ ಗೋವಿಂದಪ್ಪ ಸಾವಜ್ಜಿ ಮತ್ತಿತರರು ಈ ವೇಳೆ ಹಾಜರಿದ್ದರು.

ಲಯನ್ಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲೂ ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು, ಶೇಂಗಾ ಚಿಕ್ಕಿಯನ್ನು ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಬಿ.ಎಂ. ಜಗದೀಶ್ವರಸ್ವಾಮಿ ವಿತರಿಸಿದರು.

ಲಯನ್ಸ್ ಕ್ಲಬ್ ಖಜಾಂಚಿ ಹುಡೇದರ್ ಸಿದ್ದೇಶ್, ಸದಸ್ಯ ಹುಳ್ಳಳ್ಳಿ ಸಿದ್ದೇಶ್, ಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ್ ಅವರೂ ಹಾಜರಿದ್ದು ವಿತರಣೆ ಮಾಡಿದರು.

ಎಲ್ಲಾ ಶಾಲೆಗಳಲ್ಲಿ ಮಕ್ಕಳು ತಮಗೆ ಇಷ್ಟವಾದ ಮೊಟ್ಟೆ ಅಥವಾ ಬಾಳೆಹಣ್ಣು, ಶೇಂಗಾ ಚಿಕ್ಕಿ ತಿಂದು ಸಂಭ್ರಮಿಸಿದರು.

# ಅಮೃತ ಮಹೋತ್ಸವ : ಯುವ ಕಾಂಗ್ರೆಸ್ ವಿವಿಧ ಸಾಮಾಜಿಕ ಕಾರ್ಯಕ್ರಮಗಳು

ದಾವಣಗೆರೆ, ಜು. 27- ಆಗಸ್ಟ್ 3 ರಂದು ನಡೆಯಲಿರುವ ಸಿದ್ದರಾಮಯ್ಯ ಅಮೃತ ಮಹೋತ್ಸವದ ಅಂಗವಾಗಿ ಯುವ ಕಾಂಗ್ರೆಸ್ ವತಿಯಿಂದ 5 ದಿನಗಳು ಜಿಲ್ಲೆಯ 7 ಕ್ಷೇತ್ರಗಳಲ್ಲೂ ವಿವಿಧ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಹರಿಹರ ತಾಲ್ಲೂಕಿನ ಗುತ್ತೂರಿನಲ್ಲಿರುವ ವೃದ್ದಾಶ್ರಮದಲ್ಲಿ ಹಣ್ಣುಗಳ ವಿತರಣೆ ಮಾಡುವ ಮೂಲಕ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುವುದು. ನಾಳೆ ದಿನಾಂಕ 28ರಂದು ಮಾಯಕೊಂಡದಲ್ಲಿ ಅಂಗನವಾಡಿ ಕಾರ್ಯಕರ್ತರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಘಟಕದ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹೊನ್ನಾಳಿಯಲ್ಲಿ ಅಂಧ ಹಾಡುಗಾರರಿಂದ ಕೇಕ್ ಕತ್ತರಿಸಿ ಸಿದ್ದರಾಮಯ್ಯ ಅವರ ಜನ್ಮ ದಿನ ಆಚರಿಸಲಾಗುವುದು. ಜಗಳೂರು ಹಾಗೂ ಚನ್ನಗಿರಿಯಲ್ಲಿ ಸಸಿಗಳನ್ನು ನೆಡುವುದು ಸೇರಿದಂತೆ, ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಆಗಸ್ಟ್ 3ರಂದು ದಾವಣಗೆರೆ ಉತ್ತರ ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ತುರ್ಚಘಟ್ಟದ ಆಶ್ರಮ ಹಾಗೂ ಜೆಜೆಎಂ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಣೆ ಮಾಡಲಿದ್ದೇವೆ ಎಂದರು.

ಕಾಂಗ್ರೆಸ್‌ನಲ್ಲಿರುವ 14 ಬ್ಲಾಕ್‌ಗಳಲ್ಲಿ ಒಂದೊಂದು ಬ್ಲಾಕ್‌ನಿಂದ ಕನಿಷ್ಠ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಯೂತ್ ಕಾಂಗ್ರೆಸ್ ಉಪಾಧ್ಯಕ್ಷ ರಂಜಿತ್, ರಾಜ್ಯ ಉಸ್ತುವಾರಿ ಚೇತನ್‌ಗೌಡ, ಪ್ರಧಾನ ಕಾರ್ಯದರ್ಶಿ ಹಾಲೇಶ್, ಮೆಹಬೂಬ್ ಬಾಷ, ನವೀನ್ ನಲವಾಡಿ ಇದ್ದರು.

# ಆರ್.ಎಸ್.ಎಸ್. ಮೇಲೆ ಬುಲ್ಡೋಜರ್ ನುಗ್ಗಿಸಬೇಕು ಎಂದಿಲ್ಲ : ಸಿದ್ದರಾಮಯ್ಯ

ಬೆಂಗಳೂರು, ಜು. 27 - ಶ್ರೀರಾಮಸೇನೆ, ಭಜರಂಗದಳ, ಆರ್.ಎಸ್.ಎಸ್. ಮೇಲೆ ಬುಲ್ಡೋಜರ್ ನುಗ್ಗಿಸಬೇಕು ಎಂದು ನಾನು ಕರೆಕೊಟ್ಟಿದ್ದೇನೆ ಎಂಬ ಅರ್ಥದಲ್ಲಿ ಪ್ರಕಟವಾಗಿದ್ದ ಪತ್ರಿಕಾ ವರದಿಯನ್ನು ಬಹಳಷ್ಟು ಬಿಜೆಪಿ ಬೆಂಬಲಿಗರು ಹಂಚಿಕೊಂಡು ನನ್ನ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ. ಇದು ಸಂಪೂರ್ಣ ಸುಳ್ಳು ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ವಿರೋಧ ಪಕ್ಷದವರು, ಅಲ್ಪಸಂಖ್ಯಾತರು, ಸೈದ್ಧಾಂತಿಕ ವಿರೋಧಿಗಳ ಮನೆ ಮೇಲೆ ಬುಲ್ಡೋಜರ್ ಹರಿಸುತ್ತೇವೆ ಎಂಬ ಹಿಂಸಾತ್ಮಕ ಹೇಳಿಕೆಗಳೇ ತಪ್ಪು, ಇಂತಹ ಹೇಳಿಕೆಗಳಿಂದ ಪ್ರಚೋದನೆಗೀಡಾಗಿ ಇನ್ನೊಂದು ಗುಂಪಿನವರು ಶ್ರೀರಾಮಸೇನೆ, ಭಜರಂಗ ದಳದವರ ಮನೆ ಮೇಲೆ ಬುಲ್ಡೋಜರ್ ಹರಿಸುತ್ತೇವೆ ಎಂದು ಹೇಳುತ್ತಾರೆ. ಇದಕ್ಕೆ ಯಾರೂ ಅವಕಾಶ ನೀಡಬಾರದು ಎಂದಷ್ಟೇ ನಾನು ಹೇಳಿದ್ದು.

ಇದನ್ನು ತಿರುಚಿ ಪ್ರಕಟವಾದ ವರದಿಯನ್ನು ಇನ್ನಷ್ಟು ತಿರುಚಿ ಕೆಲವು ಸಮಾಜ ವಿರೋಧಿ ಶಕ್ತಿಗಳು ನನ್ನ ವಿರುದ್ದ ಅಪಪ್ರಚಾರ ನಡೆಸುತ್ತಿವೆ. ಈ ಪ್ರಚೋದನಕಾರಿ ಮತ್ತು ಕಾನೂನು ಬಾಹಿರ ನಡೆ-ನುಡಿಗಳನ್ನು ನಿಲ್ಲಿಸದೇ ಹೋದರೆ ಅಂತಹವರ ವಿರುದ್ಧ ಕಾನೂನು ಕ್ರಮಕ್ಕಾಗಿ ಪೊಲೀಸರಿಗೆ ದೂರು ನೀಡಲು ನಿರ್ಧರಿಸಿದ್ದೇನೆ ಎಂದಿದ್ದಾರೆ.


## ಶಿಂಗ್ರಿಹಳ್ಳಿ ಬೇತೂರು ಸೋಮಪ್ಪ ಲಿಂಗೈಕ್ಯ



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಶಿಂಗ್ರಿಹಳ್ಳಿ ಗ್ರಾಮದ ವಾಸಿ


**ಬೇತೂರು ಸೋಮಪ್ಪ**

ಇವರು ದಿನಾಂಕ 27.7.2022ರ ಬುಧವಾರ ಮಧ್ಯಾಹ್ನ 1.30ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಪತ್ನಿ ಗೌರಮ್ಮ, ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.7.2022ರ ಗುರುವಾರ ಬೆಳಿಗ್ಗೆ 11.30ಕ್ಕೆ ಸ್ವಗ್ರಾಮವಾದ ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಶಿಂಗ್ರಿಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ ಹಾಗೂ ಬಂಧು-ಮಿತ್ರರು**

**ಮೊ : 97310 69936, 96638 48819**

## 9ನೇ ವರ್ಷದ ಪುಣ್ಯಸ್ಮರಣೆ



**ದಿ|| ಬಿ.ಜಿ. ಶಕುಂತಲಮ್ಮ**

ಮರಣ : 28.07.2013

**ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ**

**ಪತಿ : ಬಿ.ಜಿ. ಮರುಳಸಿದ್ದನಗೌಡ**


ಬಿ.ಇ.ಓ.(ನಿ) ಹಾಗೂ ಮಾಜಿ ಅಧ್ಯಕ್ಷರು, ನಿ. ಸರ್ಕಾರಿ ನೌಕರರ ಸಂಘ (ರಿ.) ದಾವಣಗೆರೆ.

**ಶ್ರೀಮತಿ ಮಂಜುಳಾ ದಯಾನಂದ ಬಿ. ಅರಳಿ**

**ಶಾಂತಲಾ ಬಿ. ಪ್ರಕಾಶ್, ಕೋಮಲ ಬಿ. ಪ್ರಸನ್ನ,**

**ಮೊಮ್ಮಕ್ಕಳಾದ : ದೀಕ್ಷಾ , ಭೂಮಿಕಾ, ಶಶಾಂಕ್, ರಿಷಿಕ, ಋತ್ವಿಕ, ನೈನಿಕಾ**

## ಹನುಮಂತಪ್ಪ.ಬಿ ನಿಧನ



ದಾವಣಗೆರೆ ವಿಮಾನಮಟ್ಟಿ ವಾಸಿ ಮಹಾನಗರ ಪಾಲಿಕೆ ನಿವೃತ್ತ ನೌಕರರಾದ ಹನುಮಂತಪ್ಪ.ಬಿ (60) ಇವರು ದಿನಾಂಕ 27.7.2022ರ ಬುಧವಾರ ಮಧ್ಯಾಹ್ನ 1.30ಕ್ಕೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.7.2022ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಆರ್.ಹೆಚ್ ಬೃಂದಾವನದಲ್ಲಿ ನೆರವೇರಲಿದೆ.


# ಅಲ್ಪಸಂಖ್ಯಾತರ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಅಡಿಪಾಯ : ಜಮೀರ್

ದಾವಣಗೆರೆ, ಜು. 27- ಈ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅದರಲ್ಲೂ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಸಾರಥ್ಯದಲ್ಲಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿ, ಅಲ್ಪಸಂಖ್ಯಾತರ ಅಭಿವೃದ್ಧಿಗೆ ಭದ್ರ ಬುನಾದಿಯಾಗಿದ್ದರು ಎಂದು ಮಾಜಿ ಸಚಿವ, ಶಾಸಕ ಜಮೀರ್ ಅಹ್ಮದ್ ಹೇಳಿದರು.

ತಾಜ್ ಪ್ಯಾಲೇಸ್‌ನಲ್ಲಿ ಹಮ್ಮಿಕೊಂಡಿದ್ದ ಅಲ್ಪಸಂಖ್ಯಾತರ ಜಾಗೃತಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸಿ, ಮಸೀದಿಯಲ್ಲಿ ಸೇವೆ ಸಲ್ಲಿಸುವ ಉಲೇಮಾ ಹಾಗೂ ಮೌಜಿನ್‌ಗಳಿಗೆ ವಕ್ಫ್ ಇಲಾಖೆಯಿಂದ ಮಾಸಿಕ ಮಾಸಾಶನ ಒದಗಿಸಿದ ಕೀರ್ತಿ ಸಿದ್ಧರಾಮಯ್ಯ ಅವರಿಗೆ ಸಲ್ಲಬೇಕಿದೆ ಎಂದು ವಿವರಿಸಿದ ಜಮೀರ್ ಅಹ್ಮದ್, ರಾಜ್ಯದಲ್ಲಿ ಮುಸ್ಲಿಮರಿಗೆ ಆಸರೆಯಾಗಿರುವ ಪಕ್ಷ ಎಂದರೆ ಅದು ಕಾಂಗ್ರೆಸ್ ಎಂದು ಉಚ್ಚರಿಸಿದರು.

ವಿಧಾನ ಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್, ಮುಸ್ಲಿಂ ಮುಖಂಡರಾದ ಸೈಯದ್ ಸೈಫುಲ್ಲಾ, ಸಾಧಿಕ್ ಪೈಲ್ವಾನ್, ಹೆಚ್. ಮಹ್ಮದ್ ಇಕ್ಬಾಲ್, ಸಿರಾಜ್ ಅಹ್ಮದ್, ಅಯೂಬ್ ಪೈಲ್ವಾನ್ ಸೇರಿದಂತೆ ಮೌಲಾನರು, ವಿವಿಧ ಸಮಾಜಗಳ ಮುಖಂಡರಾದ ಬಿ. ವೀರಣ್ಣ, ಎಂ.ಬಿ. ಸುಭಾಶ್ಚಂದ್ರ, ಮಂಜುನಾಥ್ ಜಿಲ್ಲಾ ಹಾಗೂ ತಾಲ್ಲೂಕು ಘಟಕದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

# ವಿದ್ಯುತ್ ಕಾಣದ 18 ಸಾವಿರ ಹಳ್ಳಿಗಳಿಗೆ ಮೋದಿ ಸರ್ಕಾರದಲ್ಲಿ ಸಂಪರ್ಕ

## 'ಉಜ್ವಲ ಭಾರತ-ಉಜ್ವಲ ಭವಿಷ್ಯ' ವಿದ್ಯುತ್ ಮಹೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್

ದಾವಣಗೆರೆ, ಜು.27 - ದೇಶಕ್ಕೆ ಸ್ವಾತಂತ್ರ್ಯ ದೊರೆತು ಆರು ದಶಕಗಳು ಕಳೆದರೂ ವಿದ್ಯುತ್ ಸಂಪರ್ಕ ಕಾಣದ 18,000 ಗ್ರಾಮಗಳಿಗೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಳೆದ ಎಂಟು ವರ್ಷಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿದೆ ಎಂದು ಶಾಸಕ ಎಸ್.ಎ ರವೀಂದ್ರನಾಥ್ ಹೇಳಿದರು.

ಬುಧವಾರ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಉಜ್ವಲ ಭಾರತ-ಉಜ್ವಲ ಭವಿಷ್ಯ' ವಿದ್ಯುತ್ ಮಹೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತಕ್ಕೆ ಸ್ವಾತಂತ್ರ್ಯ ದೊರೆತು ಅನೇಕ ವರ್ಷಗಳು ಕಳೆದರೂ ಕೂಡ ದೇಶದ ಎಷ್ಟೋ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕವಿರಲಿಲ್ಲ. ಇದನ್ನು ಮನಗಂಡ ಕೇಂದ್ರ ಸರ್ಕಾರ, ಕಳೆದ ಎಂಟು ವರ್ಷಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಸಾವಿರಾರು ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದೆ ಎಂದು ಹೇಳಿದರು.

ನಮ್ಮ ದಿನ ನಿತ್ಯದ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರಸ್ತುತ ದಿನಮಾನಗಳಲ್ಲಿ ವಿದ್ಯುತ್ ಅತಿ ಮುಖ್ಯವಾಗಿದೆ. ಮುಂದಿನ ದಿನಗಳಲ್ಲಿ ಭಾರತ ಪ್ರಪಂಚದಲ್ಲಿಯೇ ಅತಿ ಹೆಚ್ಚು ವಿದ್ಯುತ್ ಉತ್ಪಾದಿಸುವ ರಾಷ್ಟ್ರವಾಗಿ ಹೊರಹೊಮ್ಮಲಿ ಎಂದು ಆಶಿಸಿದರು.

ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಮಾತನಾಡಿ, ಹಿಂದೆ 8 ರಿಂದ 10 ಹಳ್ಳಿಗಳನ್ನು ಒಳಗೊಂಡು ಒಂದು ಪವರ್ ಲೈನ್ ಮೂಲಕ ವಿದ್ಯುತ್ ಪೂರೈಕೆ ಮಾಡಲಾಗುತ್ತಿತ್ತು.




ಆದರೆ ಪ್ರಸ್ತುತ ಪ್ರತಿ ಹಳ್ಳಿಗೂ ಪ್ರತ್ಯೇಕ ವಿದ್ಯುತ್ ಪೂರೈಕೆ ಲೈನ್‌ಗಳನ್ನು ಅಳವಡಿಸಲಾಗಿದೆ. ಹೊಸ ಹೊಸ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ವಿದ್ಯುತ್ ಇಲಾಖೆಗಳು ಹೊಂದಾಣಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಪವರ್ ಗ್ರೀಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆ ನಾಮ ನಿರ್ದೇಶಿತ ಸದಸ್ಯ ಕೆ.ಎನ್. ಓಂಕಾರಪ್ಪ ಮಾತನಾಡಿ, ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಕಂಪನಿಯು ದೇಶದ ವಿವಿಧ ರಾಜ್ಯಗಳಲ್ಲಿ ವಿದ್ಯುತ್ ಸಂಬಂಧಿತ ಅನೇಕ ಕಾರ್ಯಗಳನ್ನು ಕೈಗೊಂಡಿದೆ. ಕಂಪನಿ ವತಿಯಿಂದ ಸಾಕಷ್ಟು ಲೈನ್, ಗ್ರಿಡ್ ಹಾಕಲು ಅವಕಾಶವಿದೆ. ಆದ್ದರಿಂದ ಅಧಿಕಾರಿಗಳು ಅವಶ್ಯವಿರುವ ಅನುದಾನದ ಕುರಿತು ಸಮಗ್ರ ವರದಿ ತಯಾರಿಸಿ ಸಲ್ಲಿಸಿದರೆ, ಬೇಡಿಕೆಗೆ ತಕ್ಕಷ್ಟು ಅನುದಾನ ಮಂಜೂರು ಮಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದೆಂದರು.

ಮಾಯಕೊಂಡ ಶಾಸಕ ಪ್ರೊ. ಎನ್.ಲಿಂಗಣ್ಣ ಮಾತನಾಡಿ, ರೈತರು ಅಥವಾ ಸಾರ್ವಜನಿಕರು ಕರೆ ಮಾಡಿದಾಗ ಅಧಿಕಾರಿಗಳು ಸೂಕ್ತವಾಗಿ ಸ್ಪಂದಿಸಬೇಕು. ಸಾರ್ವಜನಿಕರು ಸಹ ವಿದ್ಯುತ್ ಪೂರೈಕೆಯಲ್ಲಿ ತೊಂದರೆಗಳು ಉಂಟಾದಾಗ ಸಹನೆಯಿಂದ ತಮ್ಮ ದೂರನ್ನು ಹೇಳಿ ಪರಿಹಾರ ಕಂಡುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್, ಬೆಸ್ಕಾಂ ಕಾರ್ಯಪಾಲಕ ಅಭಿಯಂತರರಾದ ಎಂ.ಹೆಚ್ ವಿಜಯಲಕ್ಷ್ಮಿ, ಹರಿಹರ ಬೆಸ್ಕಾಂನ ಕಾರ್ಯಪಾಲಕ ಅಭಿಯಂತರರಾದ ವಿನಯ್ ಕುಮಾರ್ ಉಪಸ್ಥಿತರಿದ್ದರು.

### ವಿದ್ಯುತ್ ಸ್ವಾವಲಂಬನೆಯತ್ತ ಜಿಲ್ಲೆ: ಬಿಎಸ್. ಜಗದೀಶ್

**ವಿದ್ಯುತ್ ದೂರದ ಪ್ರದೇಶಗಳಿಗೆ ಸಾಗಿಸುವಾಗ ಸೋರಿಕೆ ಹೆಚ್ಚಾಗಿರುತ್ತದೆ. ಹೀಗಾಗಿ ಜಿಲ್ಲೆಯಲ್ಲೇ ಹೆಚ್ಚು ವಿದ್ಯುತ್ ಉತ್ಪಾದಿಸುವ ಮೂಲಕ ಸ್ವಾವಲಂಬನೆಗೆ ಮುಂದಾಗಲಾಗಿದೆ ಎಂದು ದಾವಣಗೆರೆ ವೃತ್ತ ಬೆಸ್ಕಾಂ ಅಧೀಕ್ಷಕ ಅಭಿಯಂತರ ಬಿ.ಎಸ್. ಜಗದೀಶ್ ಹೇಳಿದ್ದಾರೆ. ಜಿಲ್ಲೆಯಲ್ಲಿ 19 ಸೌರ ಘಟಕಗಳಿಂದ 118 ಮೆಗಾವ್ಯಾಟ್ ಹಾಗೂ 110 ಪವನ ಘಟಕಗಳಿಂದ 550.45 ಮೆಗಾವ್ಯಾಟ್ ವಿದ್ಯುತ್ ಪಡೆಯಲಾಗುತ್ತಿದೆ ಎಂದು ಹೇಳಿದರು. ಗ್ರೀನ್ ಎನರ್ಜಿ ಕಾರಿಡಾರ್ ಮೂಲಕ ರೈತರಿಗೆ 7 ಗಂಟೆ ಕಾಲ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.**

# ಅಂಚೆ ಅಧೀಕ್ಷಕರ ಕಛೇರಿಗೆ ಕಟ್ಟಡ ಮಂಜೂರಾತಿಗೆ ಮನವಿ

ದಾವಣಗೆರೆ, ಜು.27- ಜಿಲ್ಲೆಗೆ ಇತ್ತೀಚಿಗೆ ಮಂಜೂರಾಗಿರುವ ಅಂಚೆ ಅಧೀಕ್ಷಕರ ಕಛೇರಿಗೆ ಹೊಸ ಕಟ್ಟಡವನ್ನು ಮಂಜೂರು ಮಾಡುವಂತೆ ಸಂವಹನ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ದೆಹಲಿಯ ಅವರ ಕಛೇರಿಯಲ್ಲಿಂದು ಭೇಟಿ ಮಾಡಿದ ಸಂಸದ ಜಿ.ಎಂ.ಸಿದ್ದೇಶ್ವರ ಮನವಿ ಮಾಡಿದರು.

ಜಿಲ್ಲೆಯ ಅಂಚೆ ವ್ಯವಸ್ಥೆಯು ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳಿಂದ ಬೇರ್ಪಟ್ಟು ದಾವಣಗೆರೆ ಸ್ವತಂತ್ರ ಅಂಚೆ ಅಧೀಕ್ಷಕರ ಕಛೇರಿಯನ್ನು ಹೊಂದಿದೆ. ದಾವಣಗೆರೆಗೆ ಮಂಜೂರಾಗಿರುವ ಅಂಚೆ ಅಧೀಕ್ಷಕರ ಕಛೇರಿ ಸದ್ಯ ರೈಲ್ವೆ ನಿಲ್ದಾಣದ ಬಳಿಯಿರುವ ಅಂಚೆ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದೆ.



ಈಗಾಗಲೇ ಪಾಸ್ ಪೋರ್ಟ್ ಕಛೇರಿಯು ಮುಖ್ಯ ಅಂಚೆ ಕಛೇರಿಯಲ್ಲಿಯೇ ಕೆಲಸ ನಿರ್ವಹಿಸುತ್ತಿರುವುದರಿಂದ ಸ್ಥಳಾವಕಾಶ ಕಡಿಮೆಯಾಗಿದೆ. ಆದ್ದರಿಂದ ಅಂಚೆ ಅಧೀಕ್ಷಕರ ಕಛೇರಿಗೆ ಸ್ವಂತ ಕಟ್ಟಡ ಅನಿವಾರ್ಯವಾಗಿದೆ ಎಂಬುದನ್ನು ಸಂಸದರು ಪತ್ರದಲ್ಲಿ ವಿವರಿಸಿದ್ದಾರೆ.

ನಗರದ ದೇವರಾಜ್ ಅರಸ್ ಬಡಾವಣೆ, ಪೋಸ್ಟಲ್ ಕ್ವಾಟ್ರಸ್ ಪಕ್ಕ ಹಾಗೂ ವಿದ್ಯಾನಗರದಲ್ಲಿ ಅಂಚೆ ಇಲಾಖೆಗೆ ಸೇರಿದ ಸ್ವಂತ ಮೂರು ನಿವೇಶನಗಳಿವೆ. ಇವುಗಳಲ್ಲಿ ಬಿ.ಎಸ್.ಎನ್.ಎಲ್ ಕಛೇರಿ ಬಳಿಯಿರುವ ನಿವೇಶನ ಅಂಚೆ ಅಧೀಕ್ಷಕರ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಅತ್ಯಂತ ಸೂಕ್ತವಾಗಿದ್ದು, ಇಲ್ಲಿ ಅಂಚೆ ಅಧೀಕ್ಷಕರ ಕಛೇರಿ ನಿರ್ಮಾಣ ಮಾಡಬಹುದು, ಇದರಲ್ಲಿಯೇ ದೇವರಾಜ್ ಅರಸ್ ಬಡಾವಣೆಯ ಅಂಚೆ (5ನೇ ಪುಟಕ್ಕೆ)

# 'ಲಾಸ್ಟ್ ಬೆಂಚ್ ಸ್ಟೂಡೆಂಟ್' ಆಗಬೇಡಿ

## ವಿದ್ಯಾರ್ಥಿಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಕಿವಿಮಾತು



ದಾವಣಗೆರೆ, ಜು. 27 - ವಿದ್ಯಾರ್ಥಿಗಳು 'ಲಾಸ್ಟ್ ಬೆಂಚ್ ಸ್ಟೂಡೆಂಟ್'ಗಳಾಗದೇ, ಸಮಾಜದಲ್ಲಿ ಬದಲಾವಣೆಯ ಹರಿಕಾರರಾಗಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಕರೆ ನೀಡಿದ್ದಾರೆ.

ಬಿಐಇಟಿ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನ ಆಸ್ಪೀರಿಯ ಸಾಂಸ್ಕೃತಿಕ ಉತ್ಸವದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಸಾಕಷ್ಟು ಚಲನಚಿತ್ರಗಳಲ್ಲಿ ಲಾಸ್ಟ್ ಬೆಂಚ್ ಸ್ಟೂಡೆಂಟ್‌ಗಳನ್ನು ವೈಭವೀಕರಿಸಲಾಗಿದೆ. ಹೀರೋಗಳೆಲ್ಲ ಲಾಸ್ಟ್ ಬೆಂಚ್‌ನವರು ಎಂದು ತೋರಿಸಲಾಗುತ್ತದೆ. ಆದರೆ, ವಾಸ್ತವ ಆ ರೀತಿ ಇರುವುದಿಲ್ಲ ಎಂದರು.

ಅಧ್ಯಾಪಕರ ಮಾತು ಕೇಳದವರು, ಕಾಲೇಜಿಗೆ ಬರದವರು, ದುಶ್ಚಟಗಳಿಗೆ ಸಿಲುಕುವವರು ಹೀರೋ ಆಗುವುದಿಲ್ಲ. ಅಂತಹವರಿಂದ ಸಮಾಜಕ್ಕೆ ಒಳಿತು ತರಲು ಸಾಧ್ಯವಿಲ್ಲ ಎಂದು ರಿಷ್ಯಂತ್ ತಿಳಿಸಿದರು.

ಸಮಾಜದಲ್ಲಿ ಯಾವುದೇ ಬದಲಾವಣೆ ಆಗಬೇಕಾದರೆ ಅದು ಯುವ ಜನರಿಂದ ಮಾತ್ರ ಸಾಧ್ಯ. ಹೀಗಾಗಿ ಯುವಜನತೆ ಸರಿ ದಾರಿಯಲ್ಲಿ ಸಾಗಬೇಕಿದೆ. ಸರಿಯಾದ ಪ್ರಶ್ನೆಗಳನ್ನು ತಮ್ಮ ಉನ್ನತರಿಗೆ ಕೇಳಬೇಕಿದೆ ಎಂದವರು ಹೇಳಿದರು.

ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವ ಅಗತ್ಯವನ್ನು ಒತ್ತಿ ಹೇಳಿದ ಅವರು, ಕೇವಲ ಪಾಠಗಳಿಂದ ವ್ಯಕ್ತಿತ್ವ ಪೂರ್ಣ ಬೆಳವಣಿಗೆಯಾಗುವುದಿಲ್ಲ. ಪಠ್ಯೇತರ ಚಟುವಟಿಕೆಗಳು ವ್ಯಕ್ತಿತ್ವ ಬೆಳೆಸುತ್ತವೆ. ಇದು ಮುಂದಿನ ವೃತ್ತಿ ಜೀವನದಲ್ಲಿ ನೆರವಾಗುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್ ವಹಿಸಿದ್ದರು. ಕಾಲೇಜಿನ ಡೀನ್ ಡಾ. ಮಂಜುನಾಥ ಆಲೂರು, ಕಾಲೇಜಿನ ವೈದ್ಯರಾದ ಡಾ. ಅನುರೂಪ ಮತ್ತು ಡಾ. ಅಶ್ವಿನಿ ಮತ್ತಿತರರು ಉಪಸ್ಥಿತರಿದ್ದರು.

# ಪ್ರತಿ ಮನೆಯಲ್ಲಿ ತಿರಂಗ ಜಾಗೃತಿ

## ಭಾನುವಳ್ಳಿ : 'ಈಶ್ವರ್ ಅಲ್ಲಾ' ಮಹಿಳಾ ಸಂಘದಿಂದ ರಾಷ್ಟ್ರಧ್ವಜ ತಯಾರು

ಮಲೇಬೆನ್ನೂರು, ಜು.27- 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆ. 13 ರಿಂದ 15ರವರೆಗೆ ಪ್ರತಿ ಮನೆ ಮನೆಯಲ್ಲೂ ರಾಷ್ಟ್ರಧ್ವಜ ಹಾರಿಸಿ ದೇಶ ಭಕ್ತಿ ವ್ಯಕ್ತಪಡಿಸುವಂತೆ ಜಾಗೃತಿ ಮೂಡಿಸಲು ಭಾನುವಳ್ಳಿಯಲ್ಲಿ ಗ್ರಾಮ ಪಂಚಾಯ್ತಿಯಿಂದ ಶನಿವಾರ ಗ್ರಾಮದಲ್ಲಿ ಜಾಥಾ ನಡೆಸಲಾಯಿತು.

ಗ್ರಾ.ಪಂ. ಅಧ್ಯಕ್ಷೆ ನೇತ್ರಾವತಿ ಕೊಟ್ರೇಶ್ ಅವರು ಭಾರತ ಧ್ವಜ ಹಿಡಿದು ಭಾರತ್ ಮಾತಾ ಕಿ ಜೈ ಎನ್ನುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ಭಾರತಾಂಬೆಯ ಭಾವಚಿತ್ರಕ್ಕೆ ಹಾರ ಹಾಕಿ ವಾಹನದಲ್ಲಿ ಮೆರವಣಿಗೆ ನಡೆಸಲಾಯಿತು.

ಗ್ರಾ.ಪಂ. ಸದಸ್ಯರು, ಗ್ರಾ.ಪಂ. ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಗ್ರಾಮದ ಮುಖಂಡರು ಭಾರತ ಧ್ವಜ ಹಿಡಿದು, ಗ್ರಾಮದ ಬೀದಿಗಳಲ್ಲಿ ಸಂಚರಿಸಿ ಬೋಲೋ ಭಾರತ್ ಮಾತಾ ಕೀ ಜೈ ಘೋಷಣೆಗಳನ್ನು ಕೂಗಿದರು.

ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವದ ವೇಳೆ ಪ್ರತಿ ಮನೆಯಲ್ಲೂ ಧ್ವಜಾರೋಹಣ ಮಾಡುವಂತೆ ಗ್ರಾಮಸ್ಥರಿಗೆ ಮನವಿ ಮಾಡಲಾಯಿತು. ಗ್ರಾ.ಪಂ. ಉಪಾಧ್ಯಕ್ಷ ಕೆ. ಚಂದ್ರಪ್ಪ, ಗ್ರಾ.ಪಂ. ಸದಸ್ಯರಾದ ಎಂ.ಕೆ. ಪಾಟೀಲ್, ಚಂದ್ರಪ್ಪ ಬಾಗಜ್ಜನವರ್, ಗ್ರಾಪಂ ಪಿಡಿಓ ಜಯಕುಮಾರ್, ರೈತ ಸಂಘದ ತಾಲ್ಲೂಕು ಅಧ್ಯಕ್ಷ ಹೆಚ್.ಬಿ. ಕೊಟ್ರೇಶ್, ಪ್ರಕಾಶ್ ಸೇರಿದಂತೆ ಕರ್ನಾಟಕ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು, ಶಿಕ್ಷಕರು ಉಪಸ್ಥಿತರಿದ್ದರು.

**ರಾಷ್ಟ್ರಧ್ವಜ ತಯಾರು** : 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಭಾನುವಳ್ಳಿ ಗ್ರಾ.ಪಂ.ನ ಪ್ರತಿ ಮನೆಗೂ ರಾಷ್ಟ್ರಧ್ವಜ ಕೊಡಲು ಸಿದ್ಧತೆ ನಡೆಸಿದ್ದು, ಗ್ರಾಮಕ್ಕೆ ಬೇಕಾಗಿರುವ ಸುಮಾರು ಒಂದೂವರೆ ಸಾವಿರ ಧ್ವಜಗಳನ್ನು ಭಾನುವಳ್ಳಿ ಗ್ರಾಮದ ಈಶ್ವರ್ ಅಲ್ಲಾ ಮಹಿಳಾ ಸ್ವ ಸಹಾಯ ಸಂಘ ತಯಾರು ಮಾಡುತ್ತಿದೆ ಎಂದು ಗ್ರಾ.ಪಂ. ಅಧ್ಯಕ್ಷೆ ನೇತ್ರಾವತಿ ಕೊಟ್ರೇಶ್ ತಿಳಿಸಿದ್ದಾರೆ.



75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆಗೆ ನಮ್ಮೂರಿನ ಪ್ರತಿ ಮನೆಯಲ್ಲೂ ಧ್ವಜಾರೋಹಣ ಮಾಡಲು, ಇಲ್ಲಿನ ಗ್ರಾಮ ಪಂಚಾಯ್ತಿ ರಾಷ್ಟ್ರಧ್ವಜ ಮಾಡಿಕೊಡಲು ಈಶ್ವರ್ ಅಲ್ಲಾ ಮಹಿಳಾ ಸ್ವಸಹಾಯ ಸಂಘಕ್ಕೆ ಕೇಳಿರುವುದು ನಮ್ಮ ಪುಣ್ಯ. ನಮ್ಮ ಸಂಘದ ಮಹಿಳೆಯರು ಸೋಮವಾರ ಜಾಗೃತಿ ಜಾಥಾ ನಡೆಸಲು 100 ರಾಷ್ಟ್ರಧ್ವಜಗಳನ್ನು ತಯಾರಿಸಿಕೊಟ್ಟಿದ್ದಾರೆ. ಉಳಿದವುಗಳನ್ನೂ ಶೀಘ್ರದಲ್ಲೇ ಕೊಡುತ್ತೇವೆ.

**- ದೇವೀರಮ್ಮ, ಕಾರ್ಯದರ್ಶಿ, ಈಶ್ವರ್ ಅಲ್ಲಾ ಮಹಿಳಾ ಸ್ವಸಹಾಯ ಸಂಘ, ಭಾನುವಳ್ಳಿ.**

### ಜಿಪಂ ಸಿಇಒ ಮೆಚ್ಚುಗೆ

ಗ್ರಾಮದಲ್ಲಿ ರಾಷ್ಟ್ರಧ್ವಜ ತಯಾರು ಮಾಡುವ ಸ್ಥಳಕ್ಕೆ ಜಿಲ್ಲಾ ಪಂಚಾಯ್ತಿ ಸಿಇಒ ಡಾ. ಎ. ಚನ್ನಪ್ಪ ಭೇಟಿ ನೀಡಿ, ಗ್ರಾಮದಲ್ಲಿ ಹರ್ ಘರ್ ತಿರಂಗ ಅಭಿಯಾನಕ್ಕೆ ಬೇಕಾದ ರಾಷ್ಟ್ರಧ್ವಜ ತಯಾರಿ ಮತ್ತು ಮನೆ ಮನೆಗೆ ಧ್ವಜ ಹಂಚಿಕೆ ಕುರಿತು ಗ್ರಾ.ಪಂ. ಹಾಗೂ ಮಹಿಳಾ ಸ್ವಸಹಾಯ ಸಂಘದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

# ಭಾರತ ಶಕ್ತಿಶಾಲಿ ರಾಷ್ಟ್ರಗಳಲ್ಲೊಂದು

## ಜಿಎಂಐಟಿ ವಿದ್ಯಾರ್ಥಿ ಸಮಾವೇಶದಲ್ಲಿ ವಿಟಿಯು ರಿಜಿಸ್ಟ್ರಾರ್ ರಂಗಸ್ವಾಮಿ



ದಾವಣಗೆರೆ,ಜು.27- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ 17ನೇ ರಾಜ್ಯ ಮಟ್ಟದ ಐಎಸ್‌ಟಿಇ ವಿದ್ಯಾರ್ಥಿ ಸಮಾವೇಶ ನಡೆಯಿತು.

ಬೆಳಗಾವಿ ವಿಟಿಯು ಮೌಲ್ಯ ಮಾಪನ ವಿಭಾಗದ ರಿಜಿಸ್ಟ್ರಾರ್ ಡಾ. ಬಿ. ಇ. ರಂಗಸ್ವಾಮಿ ಉದ್ಘಾಟನೆ ಮಾಡಿ, ಜಗತ್ತಿನ ಶಕ್ತಿಶಾಲಿ ರಾಷ್ಟ್ರಗಳಲ್ಲಿ ಭಾರತವು ಒಂದು. ಭಾರತವನ್ನು ಮುನ್ನಡೆಸುವ ಜವಾಬ್ದಾರಿ ಯುವ ಪೀಳಿಗೆಯ ಮೇಲೆ ನಿಂತಿದೆ. ಕೊರೊನಾ ಹೆಮ್ಮಾರಿ ವಕ್ಕರಿಸಿದ್ದಾಗ, ಭಾರತವು ತೆಗೆದುಕೊಂಡ ಹಲವಾರು ದಿಟ್ಟತನದ ನಿರ್ಧಾರಗಳು ನಿದರ್ಶನಗಳಾಗಿವೆ. 200 ಕೋಟಿಗೂ ಅಧಿಕ ಲಸಿಕೆ ನೀಡಿ ಭಾರತವನ್ನು ಅಪಾಯದಿಂದ ದೂರ ಮಾಡಿದ್ದಲ್ಲದೆ, ಇತರೆ ದೇಶಗಳಿಗೂ ಔಷಧಿ ರವಾನೆ ಮಾಡಿ ಸೈ ಎನಿಸಿಕೊಂಡ ದೇಶ ನಮ್ಮದು ಎಂದು ತಿಳಿಸಿದರು.

ಕರ್ನಾಟಕ ಐಎಸ್‌ಟಿಇ ಚೇರ್ಮನ್ ಡಾ. ಡಿ. ಎಸ್. ಸುರೇಶ್ ಮಾತನಾಡಿ ಸಹಕಾರ, ಸಮನ್ವಯ ಮತ್ತು ಸಹಯೋಗ ಇದ್ದಲ್ಲಿ ನಾವು ಏನು ಬೇಕಾದರೂ ಸಾಧಿಸಬಹುದು, ಐಎಸ್‌ಟಿಇ ಕರ್ನಾಟಕ ಸೆಕ್ಷನ್ ಹಲವು ವಿದ್ಯಾರ್ಥಿ ಚಟುವಟಿಕೆಗಳನ್ನು ಆಯೋಜಿಸುತ್ತಿದ್ದು, ವಿದ್ಯಾರ್ಥಿಗಳ ಪ್ರತಿಕ್ರಿಯೆ ಉತ್ತಮವಾಗಿದೆ. ಈ ಕಾರ್ಯಕ್ರಮವನ್ನು ಬಹಳ ಅದ್ಧೂರಿಯಿಂದ ಆಯೋಜಿಸಿದ ಜಿಎಂಐಟಿ ಕಾಲೇಜಿಗೆ ಅಭಿನಂದನೆ ತಿಳಿಸಿದರು.

ನಂತರ ನಡೆದ ಕಾರ್ಯಕ್ರಮದಲ್ಲಿ ಐಎಸ್‌ಟಿಇ 'ಬೆಸ್ಟ್ ಸ್ಟೂಡೆಂಟ್' ಅವಾರ್ಡ್ ವಿತರಣೆ ಮಾಡಲಾಯಿತು. ಸುಮಾರು 12ಕ್ಕೂ ಹೆಚ್ಚು ವಿವಿಧ ತಾಂತ್ರಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದರು. ತಾಂತ್ರಿಕ ಚಟುವಟಿಕೆಗಳಾದ ಪೇಪರ್ ಪ್ರೆಸೆಂಟೇಶನ್, ಪೋಸ್ಟರ್ ಪ್ರೆಸೆಂಟೇಶನ್, ರಸಪ್ರಶ್ನೆ ಕಾರ್ಯಕ್ರಮ, ನೈಟ್ ಔಟ್ ಕೋಡಿಂಗ್, ಇಂಜಿನಿಯರ್ಸ್ ಐ, ಡಿಜಿಟಲ್ ಮಾರ್ಕೆಟಿಂಗ್ ಮುಖ್ಯವಾದವುಗಳು.

ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್, ಸಮಾವೇಶದ ಸಂಯೋಜಕರಾದ ಡಾ. ಮುರುಗೇಂದ್ರಪ್ಪ, ಡಾ.ಕೆ.ಭರತ್ ಉಪಸ್ಥಿತರಿದ್ದರು.

# ಶೀಘ್ರ ಬಂಧನಕ್ಕೆ ಸಿಎಂ ಆದೇಶ

**(1ನೇ ಪುಟದಿಂದ)** ಬೊಮ್ಮಾಯಿ ಹೇಳಿದ್ದಾರೆ. ಆರೋಪಿಗಳನ್ನು ಹೆಡೆಮುರಿಕಟ್ಟಿ ಹಿಡಿದು ತರುತ್ತೇವೆ. ಸಮಾಜಕ್ಕೆ ಇಂತಹವರಿಂದ ತೊಂದರೆ ಇದೆ. ಹೀಗಾಗಿ ಕೊಲೆಗಾರರ ಬಂಧನಕ್ಕೆ ಅಗತ್ಯ ಪೊಲೀಸ್ ಕ್ರಮ ಜರುಗಿಸಲು ಸರ್ಕಾರ ಆದೇಶಿಸಿದೆ ಎಂದವರು ಹೇಳಿದ್ದಾರೆ.

**ಜನೋತ್ಸವಕ್ಕೆ ಸಮರ್ಥನೆ :** ಇದೇ ಸಂದರ್ಭದಲ್ಲಿ ತಮ್ಮ ಆಡಳಿತಕ್ಕೆ ಒಂದು ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜನೋತ್ಸವ ಕಾರ್ಯಕ್ರಮ ನಡೆಸುತ್ತಿರುವುದನ್ನು ಬಲವಾಗಿ ಸಮರ್ಥಿಸಿಕೊಂಡರು.

ನನ್ನ ಒಂದು ವರ್ಷದ ಆಡಳಿತ ಸೇರಿದಂತೆ ಬಿಜೆಪಿಯ ಮೂರು ವರ್ಷಗಳ ಅಧಿಕಾರದ ಅವಧಿಯಲ್ಲಿ ನಾವು ಕೈಗೊಂಡಿರುವ ಜನಪರ ಕಾರ್ಯಕ್ರಮಗಳನ್ನು ಜನರ ಮುಂದಿಡಲು ಈ ಉತ್ಸವ ನಡೆಸುತ್ತಿದ್ದೇವೆ ಎಂದು ತಿಳಿಸಿದರು.

ಕಾಂಗ್ರೆಸ್‌ನವರು ಈ ಸಮಾವೇಶವನ್ನು ಭ್ರಷ್ಟಾಚಾರದ ಸಮಾವೇಶವೆಂದು ಟೀಕಿಸಿರುವುದಕ್ಕೆ ಕಿಡಿಕಾರಿದ ಮುಖ್ಯಮಂತ್ರಿಯವರು, ಅವರು ಅಧಿಕಾರಕ್ಕಾಗಿ ವ್ಯಕ್ತಿಗತ ಸಮಾವೇಶ ನಡೆಸುತ್ತಿದ್ದಾರೆ ಎಂದಿದ್ದಾರೆ.

ಸಿದ್ದರಾಮೋತ್ಸವ ಪಕ್ಷದ್ದಲ್ಲ, ಅವರ ರಾಜಕೀಯ ಲಾಭಕ್ಕಾಗಿ ಮಾಡಿಕೊಳ್ಳುತ್ತಿರುವುದು. ಆದರೆ, ನಾವು ಈವರೆಗೂ ಏನು ಮಾಡಿದ್ದೇವೆ, ಮುಂದೆ ಜನರಿಗೆ ಏನು ಕೊಡುತ್ತೇವೆ ಎಂಬುದನ್ನು ತಿಳಿಸದೇ ಜನೋತ್ಸವ ಕಾರ್ಯಕ್ರಮ ಮಾಡುತ್ತಿದ್ದೇವೆ ಎಂದು ಸಮರ್ಥಿಸಿಕೊಂಡರು.

# ಬಿ. ಕಲಪನಹಳ್ಳಿಯಲ್ಲಿ ಇಂದು ವಚನಾಭಿಷೇಕ

ದಾವಣಗೆರೆ ತಾಲ್ಲೂಕಿನ ಬಿ. ಕಲಪನಹಳ್ಳಿ ಗ್ರಾಮದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಇಂದಿನಿಂದ ಆಗಸ್ಟ್ 27 ರವರೆಗೆ ಮಹಾತ್ಮ ಶರಣ ಬಸವೇಶ್ವರರ ಶ್ರಾವಣ ಮಾಸದ ವಚನಾಭಿಷೇಕ ಮತ್ತು ಪೂಜಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಪ್ರತಿ ದಿನ ಬೆಳಿಗ್ಗೆ 5.30 ಕ್ಕೆ ಕೆ. ಮರುಳಪ್ಪನವರಿಂದ ಶರಣ ಸಿದ್ಧಾಂತವಾಗಿ ವಚನಾಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ. ಸದ್ಭಕ್ತರು ಈ ಪೂಜಾ ಮಹೋತ್ಸವದಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

# ವಿಶ್ವಕ್ಕೆ ಬೆಳಕು ನೀಡಿದ 12 ನೇ ಶತಮಾನ

**(1ನೇ ಪುಟದಿಂದ)** ನಿರ್ಮೂಲನೆ ಸಾಧ್ಯವಾಗುತ್ತಿಲ್ಲ. ಸ್ಪೃಶ್ಯ, ಅಸ್ಪೃಶ್ಯ ಎಂಬ ಮೇಲು-ಕೀಳು ಭಾವನೆ ಇದೆ. ಆದರೆ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ತಟ್ಟಿ-ಮುಟ್ಟಿ ಅರಿವಿನ ಜಾಗೃತಿ ಮೂಡಿಸಿ, ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯವನ್ನು ಕಲ್ಪಿಸಿದ್ದರು.

ಜಗತ್ತಿನ ಯಾವುದೇ ಮಹಾನ್ ಪುರುಷರಿಗೆ ಯಾವುದೇ ಜಾತಿ, ಭಾಷೆ, ಧರ್ಮ ಇರಲ್ಲ. ಅವರೆಲ್ಲಾ ಮಾನವ ಧರ್ಮಕ್ಕೆ ಸೇರಿದವರು. ಅದುವೇ ಲಿಂಗಾಯತ ಧರ್ಮವಾಗಿದ್ದು, ಇದು ಮಾನವ ಧರ್ಮದ ಪ್ರತೀಕ ಎಂದು ಶ್ರೀಗಳು ಹೇಳಿದರು.

ಇಂದಿನ ದಿನಗಳಲ್ಲಿ ಮಾನವನಿಗೆ ಸಂಸ್ಕಾರ ಅತಿ ಮುಖ್ಯವಾಗಿದ್ದು, ಮನಸ್ಸು ಶುದ್ಧವಾಗಿದ್ದರೆ ಆಲೋಚನೆಗಳೂ ಸಹ ಉತ್ತಮವಾಗಿರುತ್ತವೆ. ಮನಸ್ಸಿನಲ್ಲಿ ಕೊಳಕು ತುಂಬಿಕೊಳ್ಳುವ ಬದಲು ಬೆಳಕು ತುಂಬಿ ಕೊಳ್ಳಬೇಕು. ಮನುಷ್ಯತ್ವ ರೂಢಿಸಿಕೊಳ್ಳದಿದ್ದರೆ ಮೃಗವಾಗುತ್ತಾನೆ. ಜಡ ದೇವರ ಆರಾಧನೆ ಬದಲು ಇಷ್ಟಲಿಂಗ ಪೂಜೆ ಮಾಡುವ ಮೂಲಕ ನಮ್ಮ ದೇಹವನ್ನೇ ದೇಗುಲವನ್ನಾಗಿಸಿದರೆ ಮನುಷ್ಯನ ಅಭಿವೃದ್ಧಿ ಸಾಧ್ಯ ಎಂದು ಹಿತ ನುಡಿದರು.

# ಹಣವಂತರು ಉದ್ಯೋಗ ಸೃಷ್ಟಿಯತ್ತ ಗಮನ ಹರಿಸಲಿ




### ಮಾರಿಷಸ್‌ನಲ್ಲಿ ನಡೆದ ಏಕತಾ ಶರಣ ಮೇಳದಲ್ಲಿ ಮುರುಘಾ ಶರಣರು

ಮಾರಿಷಸ್, ಜು.27- ಹಣ ಉಳ್ಳವರು ಉದ್ಯೋಗ ಸೃಷ್ಟಿಯತ್ತ ಗಮನ ಹರಿಸಿದರೆ ಪ್ರತಿಯೊಬ್ಬರ ಬದುಕಿನಲ್ಲೂ ನೆಮ್ಮದಿ ಕಾಣಲು ಸಾಧ್ಯವಾಗುತ್ತದೆ ಎಂದು ಚಿತ್ರದುರ್ಗ ಮುರುಘಾ ಮಠದ ಡಾ.ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಮಾರಿಷಸ್ ದೇಶದ ಪೋಸ್ಟ್ ಲಫೆತ್ತೆ ನಗರದಲ್ಲಿ ನಡೆದ ಅಂತರ ರಾಷ್ಟ್ರೀಯ ಏಕತಾ ಶರಣ ಮೇಳದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಹಣದ ಶೇಖರಣೆ ಹೆಚ್ಚಾಗುತ್ತಿದೆ. ಅದು ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗುತ್ತಿರುವುದು ಅನಾರೋಗ್ಯಕರ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಜಗತ್ತಿನ ಕೋಟ್ಯಾಧಿಪತಿಗಳು ಉದ್ಯೋಗ ಸೃಷ್ಟಿಸುವ ಕೇಂದ್ರಗಳನ್ನು ಸ್ಥಾಪಿಸಬೇಕು. ಆಗ ಹಗರಣ ರಹಿತ ಜೀವನ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಿಸಿದರು.

ಧಾರ್ಮಿಕ ಸಂಸ್ಥೆಗಳು, ಧಾರ್ಮಿಕ ನಾಯಕರು ಇಂದು ವ್ಯಕ್ತಿಗತ ಶಾಂತಿ ಕಾಪಾಡಿಕೊಳ್ಳುವ ಜೊತೆಗೆ ಸಾಮಾಜಿಕ ಶಾಂತಿ ನೆಲೆಸುವಂತೆ ನೋಡಿಕೊಳ್ಳಬೇಕು. ಪ್ರಸ್ತುತ ಸಾಮಾಜಿಕ ಶಾಂತಿ ಹಿಂದೆಂದಿಗಿಂತಲೂ ಮುಖ್ಯವಾಗಿದೆ ಎಂದು ಶರಣರು ನುಡಿದರು.

ಸಾವಿರಾರು ಕೋಟಿ ರೂಪಾಯಿ ಇದ್ದವನು ನಿಜವಾದ ಸುಖಿಯಲ್ಲ. ಅವರ ಒಳಗೂ ತಳಮಳ, ಕೋಲಾಹಲ ಇರುತ್ತವೆ. ಆದರೆ ಯಾರ ಬಳಿ ಶಾಂತಿ-ಪ್ರೀತಿ ಇರುತ್ತದೆಯೋ ಅವನೇ ನಿಜವಾದ ಸುಖಿ. ಅವನ ಬಳಿ ಸಂಪತ್ತು ಇಲ್ಲವೆಂಬುದನ್ನು ಬಿಟ್ಟರೆ ಉಳಿದಂತೆ ಅವನು ಶಾಂತಿ ಪ್ರಿಯನೇ ಆಗಿರುತ್ತಾನೆ ಎಂದರು.

ಆಧುನಿಕ ಮಾನವ ಇಂದು ಬಹಿರಂಗದಲ್ಲಿ ಶಾಂತಿ ಹಾಗೂ ಅಂತರಂಗದಲ್ಲಿ ಸಹನೆ ಎರಡನ್ನೂ ಸಾಧಿಸಬೇಕಿದೆ. ಅದಕ್ಕಾಗಿಯೇ ಸರ್ವಧರ್ಮದಲ್ಲೂ ಧ್ಯಾನದ ಪ್ರಕ್ರಿಯೆಗೆ ಅವಕಾಶವಿದೆ ಎಂದರು.

ಭಾರತದ ಋಷಿ ಮುನಿಗಳು ಯೋಗ ಪ್ರತಿಪಾದಕರು, ಈ ದಿಶೆಯಲ್ಲಿ ಪತಂಜಲಿ ಯೋಗ ಪ್ರಚಲಿತವಾಗಿದೆ. ಕ್ರೈಸ್ತ ಧರ್ಮದಲ್ಲಿ ಸಾಮೂಹಿಕ ಪ್ರಾರ್ಥನೆ, ಇಸ್ಲಾಂನಲ್ಲಿ ನಮಾಜ್, ಬೌದ್ಧ ಧರ್ಮ ಹಾಗೂ ಜೈನ ಧರ್ಮದಲ್ಲಿ ವಿಪಶ್ಯನವೆಂಬ ಧ್ಯಾನ, ಸಿಖ್ ಧರ್ಮದಲ್ಲಿ ಭಜನೆ, ಬಸವಾದಿ ಶರಣರು ಸಂಸ್ಥಾಪಿತ ಶರಣ ತತ್ವದಲ್ಲಿ ಶಿವಯೋಗ ಪ್ರಚಲಿತದಲ್ಲಿದೆ.

ಶಿ ವ ಯೋ ಗ (5ನೇ ಪುಟಕ್ಕೆ)

# ಎನ್‌ಕೌಂಟರ್ ಮಾಡಿ

**(1ನೇ ಪುಟದಿಂದ)** ಮಾಡಲಾಯಿತು. ಈಗ ಪ್ರವೀಣ್ ಅವರ ಹತ್ಯೆಯಾಗಿದೆ. ಮುಂದೆ ಯಾವ ಕಾರ್ಯಕರ್ತನ ಶ್ರದ್ಧಾಂಜಲಿ ಮಾಡುತ್ತೇವೋ ಅನ್ನುವ ಭಾವನೆ ಕಾರ್ಯಕರ್ತರಲ್ಲಿ ಮೂಡಿದೆ. ಹಿಂದೂ ಕಾರ್ಯಕರ್ತರ ಹೆಣದ ಮೇಲೆ ಅಧಿಕಾರಕ್ಕೆ ಬಂದ ಸರ್ಕಾರಗಳು, ಜಿಹಾದಿ ಶಕ್ತಿಗಳು ಅಟ್ಟಹಾಸ ಮೆರೆಯುತ್ತಿವೆ. ಇದು ನಮ್ಮದೇ ಸರ್ಕಾರದ ದೌರ್ಬಲ್ಯ. ಹಿಂದೂ ಕಾರ್ಯಕರ್ತರ ಹತ್ಯೆ ನಡೆಯುತ್ತಿದ್ದರೂ ಪಕ್ಷದ ಅಧ್ಯಕ್ಷರೇ, ಮುಖ್ಯಮಂತ್ರಿಗಳೇ ಮತ್ತು ಗೃಹ ಸಚಿವರೇ ತಾವೇನೂ ಮಾಡುತ್ತಿದ್ದೀರಾ. ಹರ್ಷ ಕೊಲೆ ಮಾಡಿದವರು ಜೈಲಿನಲ್ಲಿ ಐಷಾರಾಮಿ ಜೀವನ ಸಾಗಿಸುತ್ತಿದ್ದಾರೆ. ವಿಡಿಯೋ ಕಾಲ್‌ಗಳನ್ನು ಮಾಡಿಕೊಂಡು ಯಾವ ಭಯ, ಆತಂಕ ಇಲ್ಲದೇ ಬದುಕುತ್ತಿದ್ದಾರೆ. ಆದರೆ, ಹಿಂದುತ್ವಕ್ಕಾಗಿ ಹೋರಾಟ ಮಾಡುತ್ತಿರುವ ನಮ್ಮ ಬಂಧುಗಳ ಹತ್ಯೆಗಳು ನಡೆಯುತ್ತಿವೆ. ಈ ಹಿಂದೆ ಬೇರೆ ಸರ್ಕಾರಗಳು ಇದ್ದಾಗ ಹಿಂದೂ ಕಾರ್ಯಕರ್ತರ ಹತ್ಯೆ ನಡೆದಾಗ ಬೊಬ್ಬೆ ಹೊಡೆಯುತ್ತಿದ್ದ ನಮ್ಮ ನಾಯಕರು ಈಗ ಅಧಿಕಾರ ಸಿಕ್ಕಿರುವಾಗ ನೀವೇನು ಮಾಡುತ್ತಿದ್ದೀರಾ ? ಎಂದು ಖಾರವಾಗಿ ಪ್ರಶ್ನಿಸಿದರು.

ಬಿಜೆಪಿ ಜಿಲ್ಲಾ ಮೋರ್ಚಾ ಅಧ್ಯಕ್ಷ ಆರ್.ಎಲ್. ಶಿವಪ್ರಕಾಶ್, ಬಿಜೆಪಿ ಮಾಜಿ ಪ್ರಧಾನ ಕಾರ್ಯದರ್ಶಿ ಎನ್. ರಾಜಶೇಖರ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಮುಖಂಡರಾದ ಪಿ.ಸಿ. ಶ್ರೀನಿವಾಸ್, ಶಿವನಗೌಡ ಪಾಟೀಲ್, ಕೆ.ಬಿ. ನರೇಂದ್ರ, ಕೆ.ಬಿ. ಗುರು, ರಾಕೇಶ್, ಸಚಿನ್, ಶಶಿಧರ್, ಟಿಂಕರ್ ಮಂಜಣ್ಣ, ಅತೀತ್ ಅಂಬರ್ಕರ್, ಗಣೇಶ್, ಪ್ರಕಾಶ್, ಸಿದ್ದೇಶ್, ಬಸವರಾಜ್, ಜ್ಯೋತಿ ಬಸಪ್ಪ ಮತ್ತಿತರರಿದ್ದರು.

# ಲೋಗೋ ಬಿಡುಗಡೆ

**(1ನೇ ಪುಟದಿಂದ)** ಶಂಕರ್, ಶಾಸಕ ಭೈರತಿ ಹಾಗು ಸುರೇಶ್ ಸ್ಥಳೀಯ ಮುಖಂಡರು ಪರಿಶೀಲನೆ ನಡೆಸಿದರು.

ಕಾರ್ಯಕ್ರಮಕ್ಕೆ 8 ರಿಂದ 10 ಲಕ್ಷ ಜನ ಸೇರುವ ನಿರೀಕ್ಷೆ ಇದ್ದು, ಪಾರ್ಕಿಂಗ್ ವ್ಯವಸ್ಥೆ, ವಾಹನಗಳು ಹಾಗೂ ಜನರ ಸಂಚಾರ, ಮುಖ್ಯ ವೇದಿಕೆ, ಆಸನಗಳು ಸೇರಿದಂತೆ ಪ್ರಮುಖ ಸಿದ್ಧತೆಗಳ ಪರಿಶೀಲನೆ ನಡೆಸಿದರು. ಇದೇ ಸಂದರ್ಭದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಜೊತೆ ಭದ್ರತೆ ಕುರಿತು ಚರ್ಚೆ ನಡೆಸಿ, ಸೂಕ್ತ ಬಂದೋಬಸ್ತ್ ಒದಗಿಸುವಂತೆ ಮನವಿ ಮಾಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಕಾರ್ಯಕ್ರಮದ ಬ್ಲೂ ಪ್ರಿಂಟ್ ಪರಿಶೀಲಿಸಿದರು.

# ಹಲವು ಪ್ರಥಮಗಳಿಗೆ ವಿಶ್ವ ಯುವ ಕೌಶಲ್ಯ ದಿನ ಸಾಕ್ಷಿ

## ದೋಹಾ, ಕತಾರ್‌ನಲ್ಲಿ ಭಾರತೀಯ ಸಾಂಸ್ಕೃತಿಕ ಕೇಂದ್ರದ ಸಂಭ್ರಮ




ದೋಹಾ, ಕತಾರ್,ಜು.27- ಭಾರತೀಯ ಸಾಂಸ್ಕೃತಿಕ ಕೇಂದ್ರದ 'ಯೂತ್ ವಿಂಗ್', ವಿಶ್ವ ಯುವ ಕೌಶಲ್ಯ ದಿನವನ್ನು ವಿಜೃಂಭಣೆ ಯಿಂದ ಆಚರಿಸಿತು. ಭಾರತೀಯ ಸಾಂಸ್ಕೃತಿಕ ಕೇಂದ್ರದ ಇತಿಹಾಸದಲ್ಲಿ ಈ ಕಾರ್ಯಕ್ರಮವು ಹಲವು ಪ್ರಥಮಗಳಿಗೆ ಸಾಕ್ಷಿಯಾಯಿತು. ಅವುಗಳಲ್ಲಿ ಒಂದು ಯುವ ಸಾಧಕರನ್ನು ಗುರುತಿಸುವುದು, ಶ್ರೀಮತಿ ಅದ್ರಿಕಾ ಮಣಿಕಂದನ್ ನಾಯರ್, ಆನರ್ಸ್ ಮತ್ತು ಆರ್ಡರ್ ಆಫ್ ಎಕ್ಸಲೆನ್ಸ್ ಪದವಿ ಪಡೆದಿದ್ದಾರೆ. ಕತಾರ್ ವಿಶ್ವವಿದ್ಯಾನಿಲಯದಿಂದ ವಿಶಿಷ್ಟ ಸಾಧನೆಗಾಗಿ ಆಕೆಯು ಗೌರವಾನ್ವಿತ ಹಾಗೂ ಮಹೋನ್ನತ ಶ್ರೀಮತಿ ಹೈನೆಸ್ ಶೇಖಾ ಜವಾಹರ್ ಬಿಂತ್ ಹಮದ್ ಬಿನ್ ಸುಹೈಮ್ ಅಲ್ ಥಾನಿ ಅವರಿಂದ ಗೌರವಾನ್ವಿತ ವಿದ್ಯಾರ್ಥಿ ಪ್ರಶಸ್ತಿಯನ್ನು ಪಡೆದದ್ದು ಭಾರತೀಯರಿಗೆ ಹೆಮ್ಮೆಯ ಕ್ಷಣವಾಗಿತ್ತು.

ಹದಿನಾಲ್ಕು ವರ್ಷ ವಯಸ್ಸಿನ ಹಾಗೂ ಓರಿಕ್ಸ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಓದುತ್ತಿರುವ ಅನ್ವಿ ಅಮಿತ್ ಜೋಶಿ, 7ನೇ ವಯಸ್ಸಿನಿಂದ ಟ್ರೆಕ್ಕಿಂಗ್ ಅಭ್ಯಾಸ ಮಾಡುತ್ತಿದ್ದು, ಟಾಂಜೇನಿಯಾದ 5895 ಮೀಟರ್ ಎತ್ತರದ ಜ್ವಾಲಾಮುಖಿ ಶಿಖರ ಮೌಂಟ್ ಕಿಲಿಮಂಜಾರೋವನ್ನು ತಲುಪಿದ್ದಾರೆ. ಕಾರ್ಯಕ್ರಮದಲ್ಲಿ ಗುರುತಿಸಲ್ಪಟ್ಟ ಮತ್ತೊಂದು ಪ್ರತಿಭೆ ಹಾಗೂ ಸಾಧಕಿ ಡಾ. ಹರ್ಷಿತಾ ಶೈಲೇಶ್, ಕತಾರ್ ವಿಶ್ವವಿದ್ಯಾನಿಲಯದಿಂದ, 'ಸ್ತನ ಕ್ಯಾನ್ಸರ್ ನಲ್ಲಿ ಪ್ರಸರಣ ಸಿಗ್ನಲಿಂಗ್' ಎಂಬ ತನ್ನ ಪ್ರಬಂಧವನ್ನು ಪೂರ್ಣಗೊಳಿಸಿ, ಅದೇ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದಿದ್ದಾರೆ.

### ವಿದೇಶದಲ್ಲಿ ಕನ್ನಡಿಗರ ಕಲರವ

ಸನ್ಮಾನ ಸಮಾರಂಭವನ್ನು ಕೇಂದ್ರದ ಪ್ರಧಾನ ಕಾರ್ಯದರ್ಶಿ ಕೃಷ್ಣ ಕುಮಾರ್ ಬಂಧಕವಿ ನಡೆಸಿಕೊಟ್ಟರು. ಐಸಿಸಿಯ ಪ್ರಥಮ ಕಾರ್ಯದರ್ಶಿ ಕ್ಸೇವಿಯರ್ ಧನರಾಜ್, ಡಿಟಿಎಂ ಸನ್ನಿ ವರ್ಗೀಸ್, ಡಾ ಕವಿತಾ ಮುಸ್ತಫಾ, ಪಿ. ಎನ್. ಬಾಬುರಾಜನ್ ಮತ್ತು ಕೆ. ಎಸ್. ಪ್ರಸಾದ್ ಅತಿಥಿಗಳಾಗಿ ಆಗಮಿಸಿದ್ದರು.

ಐಸಿಬಿಎಫ್ ಅಧ್ಯಕ್ಷ ವಿನೋದ್ ನಾಯರ್, ಕರ್ನಾಟಕ ಸಂಘದ ಕತಾರ್ ಅಧ್ಯಕ್ಷ ಮಹೇಶ್ ಗೌಡ, ಭಾರತೀಯ ಸಾಂಸ್ಕೃತಿಕ ಕೇಂದ್ರದ ಉಪಾಧ್ಯಕ್ಷ ಸುಬ್ರಹ್ಮಣ್ಯ ಹೆಬ್ಬಾಗಿಲು, ಶ್ರೀಮತಿ ರಜನಿಮೂರ್ತಿ, ಅಫ್ಜಲ್ ಮಜೀದ್ ಮತ್ತಿತರರು ಉಪಸ್ಥಿತರಿದ್ದರು.

ಮುಖ್ಯ ಅತಿಥಿ ಕ್ಸೇವಿಯರ್ ಧನರಾಜ್ ಅವರ ಪ್ರೇರಕ ಭಾಷಣ ಮತ್ತು ಅನುಭವಿ ಟೋಸ್ಟ್ ಮಾಸ್ಟರ್ ಡಿಟಿಎಂ ಸನ್ನಿ ವರ್ಗೀಸ್ ಅವರು ನೀಡಿದ ಸ್ಫೂರ್ತಿದಾಯಕ ಭಾಷಣ ಗಮನ ಸೆಳೆಯಿತು.

ಐಸಿಸಿ ಯೂತ್ ವಿಂಗ್ ತಂಡವು ಇಂತಹ ದೊಡ್ಡ ಕಾರ್ಯಕ್ರಮದ ಪರಿಕಲ್ಪನೆ, ಯೋ ಜ ನೆ ಯಿಂದ ಕಾರ್ಯಗತಗೊಳಿಸುವವರೆಗೆ ಸಂಪೂರ್ಣ ಜವಾಬ್ದಾರಿ ತೆಗೆದು ಕೊಂಡಿದ್ದು ಸಹ ಇದೇ ಮೊದಲು. ಇಡೀ ಕಾರ್ಯಕ್ರಮವನ್ನು ಶ್ರೀಮತಿ ಹರಿಕಾ, ದಿಶಾರಿ ಮತ್ತು ಪಲ್ಲವಿ ಮುನ್ನಡೆಸಿದರು ಮತ್ತು ಸಂಯೋಜಿಸಿದರು. ಸಾಧನಾ ಮತ್ತು ಮಂಜೋತ್ ಅವರ ನೇತೃತ್ವದಲ್ಲಿ 'ಫ್ಯಾಷನ್ ಶೋ', ಶ್ಯಾಮ್ ಮೋಹನ್ ಅವರಿಂದ ಗಾಯನ ತಂಡಗಳು ಮತ್ತು ದಿಲೀಶ್ ಮತ್ತು ಮಂಜಿತ್ ಅವರಿಂದ ವಾದ್ಯ ಸಂಗೀತ, 'ವೆಜಿಟೇಬಲ್ ಕಾರ್ವಿಂಗ್' ಮತ್ತು 'ಬೆಸ್ಟ್ ಔಟ್ ಆಫ್ ವೇಸ್ಟ್' ಅನ್ನು ನವೀನ್, ಪ್ರಿಯಾ ಮತ್ತು ಹಾಶಿಮ್ ಮುನ್ನಡೆಸಿದರು. ಕಾರ್ಯಕ್ರಮದ ದಿನ ವಿನೋದ್, ನೌಫುಲ್, ಆಶಿಕ್ ಚಟುವಟಿಕೆಗಳಿಗೆ ನಿರಂತರವಾಗಿ ಬೆಂಬಲ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರದರ್ಶನ ನೀಡಿದವರಲ್ಲಿ ಭಾರತೀಯ ಸಾಂಸ್ಕೃತಿಕ ಕೇಂದ್ರದ ವೇದಿಕೆಯಲ್ಲಿ ಮೊದಲ ಬಾರಿಗೆ ಬಂದವರು, ಅನೇಕ ಗಾಯಕರು, ನೃತ್ಯ ತಂಡಗಳು, ಚಂಡೆಮೇಳಮ್‌ನಿಂದ ವಾದ್ಯ ಸಂಗೀತ, ತಮಿಳು ಪರೈ ನೃತ್ಯ ಹೀಗೆ ಹತ್ತಾರು ಕಾರ್ಯಕ್ರಮಗಳಿಗೆ ದಿನ ಸಾಕ್ಷಿಯಾಯಿತು.

# 31ರಂದು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



**ಹರಪನಹಳ್ಳಿ**

ಹರಪನಹಳ್ಳಿ, ಜು. 27- ತಾಲ್ಲೂಕಿನ ದೇವರ ತಿಮ್ಲಾಪುರ ಗ್ರಾಮದ ಲಕ್ಷ್ಮಿ ವೆಂಕಟೇಶ್ವರ ಸಮುದಾಯ ಭವನದಲ್ಲಿ ಇದೇ ದಿನಾಂಕ 31ರ ಭಾನುವಾರ ಬೆಳಿಗ್ಗೆ 10.30ಕ್ಕೆ ತರುಣ್ ಎಜುಕೇಷನಲ್ ಮತ್ತು ರಿಸರ್ಚ್ ಅಸೋಷಿಯೇಷನ್ ಹಾಗೂ ಬಸವ ಸೈನ್ಯ ತಾಲ್ಲೂಕು ಘಟಕದಿಂದ 2021-22ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸ ಲಾಗುವುದು ಎಂದು ಡಾ.ಜಯ್ಯಣ್ಣ ಕಂಚಿಕೇರಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾರಂಭದ ಸಾನ್ನಿಧ್ಯವನ್ನು ಕೂಡಲ ಸಂಗಮ ಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ, ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ನೀಲಗುಂದ ಗುಡ್ಡದ ಸಂಸ್ಥಾನ ಜಂಗಮ ಪೀಠದ ಶ್ರೀ ಚನ್ನಬಸವ ಶಿವ ಯೋಗಿ, ಅರಸಿಕೆರೆ ಶ್ರೀ ಕೋಲಶಾಂತೇಶ್ವರ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ, ಅಡವಿಹಳ್ಳಿ ಶ್ರೀ ವೀರಗಂಗಾಧರ ಹಾಲಸ್ವಾಮೀಜಿ ವಹಿಸುವವರು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶಾಸಕ ಎಸ್.ವಿ.ರಾಮ ಚಂದ್ರಪ್ಪ, ನಿವೃತ್ತ ಲೆಕ್ಕಾಧಿಕಾರಿ ಎ.ವೀರಣ್ಣ, ಮಾಜಿ ಶಾಸಕ ರುಗಳಾದ ನಂದಿಹಳ್ಳಿ ಹಾಲಪ್ಪ, ಹೆಚ್.ಎಸ್.ಶಿವಶಂಕರ್, ಮಾಜಿ ಮಹಾಪೌರ ಬಿ.ಜಿ.ಅಜಯ್ ಕುಮಾರ್, ಚಂದ್ರ ಶೇಖರ ಭದ್ರವಾಡಿ, ನಿವೃತ್ತ ಪ್ರಾಂಶುಪಾಲ ಟಿ.ರಾಜಪ್ಪ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

**ನಾನೂ ಸೇವಾಕಾಂಕ್ಷಿ :** ನಾನೂ ಮೂಲತಃ ತಾಲ್ಲೂಕಿನ ಚಿಕ್ಕಮೆಗಳಗೇರಿ ಗ್ರಾಮದ ವಾಸಿಯಾಗಿದ್ದು, ನಟ ಪುನೀತ್ ಸಾವಿನ ಬಳಿಕ ಅವರ ಸಾಮಾಜಿಕ ಸೇವೆ ನನಗೆ ಪ್ರೇರಣೆಯಾಗಿದ್ದು, ಈ ನಿಟ್ಟಿನಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಏನಾದರೂ ಸೇವೆಯನ್ನು ಮಾಡಬೇಕು ಎನ್ನುವ ಹಂಬಲ ಹೊಂದಿದ್ದೇನೆ. ತಾಲೂಕಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಉದ್ಯೋಗ, ಕೈಗಾರಿಕೆಗೆ ಉತ್ತೇಜನ ಸೇರಿದಂತೆ ಜನಸಾಮಾನ್ಯರ ಸಮಸ್ಯೆಗಳನ್ನು ಅರಿತು ಅವುಗಳನ್ನು ಈಡೇರಿಸುವ ಸಲುವಾಗಿ ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಮೂರೂ ಪಕ್ಷಗಳಿಂದ ನನಗೆ ಆಹ್ವಾನಿಸಿದ್ದು, ನಾನು ಸ್ಪರ್ಧಿಸುವುದಾಗಿ ಘೋಷಿಸಿದರು.

ಈ ಸಂದರ್ಭದಲ್ಲಿ ಕಂಚಿಕೇರಿ ಪಿ.ಸಿದ್ದೇಶ್, ಅಳಿಗಂಚಿಕೇರಿ ಬಣಕಾರ ಸಿದ್ದಣ್ಣ, ಬಿ.ನಾಗರಾಜ, ಸೇರಿದಂತೆ ಇತರರು ಇದ್ದರು.

## ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ

ದಾವಣಗೆರೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಉಳುಪಿನಕಟ್ಟೆ, ಆನಗೋಡು ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ 'ವಿಶ್ವ ಪರಿಸರ ಸಂರಕ್ಷಣಾ' ದಿನದ ಅಂಗವಾಗಿ ಜಿಲ್ಲೆಯ ಎಲ್ಲ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ' ವಿಷಯದ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಇಂದು ನಗರದ ಮಹಿಳಾ ಸೇವಾ ಸಮಾಜ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದ್ದು, ವಿಜೇತ ವಿದ್ಯಾರ್ಥಿ ಗಳಿಗೆ ನಗದು ಪುರಸ್ಕಾರದೊಂದಿಗೆ ಪ್ರಶಸ್ತಿ ಪತ್ರ ವಿತರಿಸಲಾಗುವುದು ಎಂದು ತಿಳಿಸಿದೆ.

# ಮಕ್ಕಳ ಹಕ್ಕು ಗೌರವಿಸಬೇಕು

## ರಾಣೇಬೆನ್ನೂರಿನ ನ್ಯಾಯಾಧೀಶರಾದ ಸಿದ್ದರಾಜು ಕರೆ



ರಾಣೇಬೆನ್ನೂರು, ಜು. 27- ಮಕ್ಕಳ ಮನಸ್ಸು ಸೂಕ್ಷ್ಮವಾಗಿರುತ್ತದೆ. ಅವರನ್ನು ಸಚ್ಚಾರಿತ್ರ್ಯವಂತರನ್ನಾಗಿಸುವ ಜವಾಬ್ದಾರಿ ಪಾಲಕರು ಮತ್ತು ಶಿಕ್ಷಕರದ್ದಾಗಿದೆ ಎಂದು ನ್ಯಾಯಾಧೀಶ ಬಿ. ಸಿದ್ದರಾಜು ತಿಳಿಸಿದರು.

ತಾಲ್ಲೂಕು ಆಡಳಿತ, ಶಿಕ್ಷಣ, ನ್ಯಾಯಾಂಗ, ಪೊಲೀಸ್ ಇಲಾಖೆ ಮತ್ತು ವಕೀಲರ ಸಂಘ ಜಂಟಿಯಾಗಿ ನಡೆಸಿದ ಮಕ್ಕಳ ಹಕ್ಕು ದಿನಾಚರಣೆ ಪ್ರಯುಕ್ತ ನಗರದ ಅಂಬೇಡ್ಕರ್ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಹಕ್ಕುಗಳನ್ನು ಗೌರವಿಸಬೇಕು. 4 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯೋಪಾಧ್ಯಾಯ ಜಿ. ಚಂದ್ರಶೇಖರಪ್ಪ ವಹಿಸಿದ್ದರು. ವಕೀಲ ಸಿ.ಇ. ಕರಿಗೌಡ ಉಪನ್ಯಾಸ ನೀಡಿದರು. ಸರ್ಕಾರಿ ಅಭಿಯೋಜಕ ಎಸ್.ಕೆ. ಎಳೆಹೊಳಿ, ಶಿಕ್ಷಣಾಧಿಕಾರಿ ಗುರುಪ್ರಸಾದ್, ಶಿಕ್ಷಕ ಪಿ.ಎಚ್.ಬಣಕಾರ, ಕಂದಾಯ ನಿರೀಕ್ಷಕ ಅಶೋಕ ಅರಳೇಶ್ವರ ಮತ್ತು ವಕೀಲರ ಸಂಘದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

# ನಗರದಲ್ಲಿ ಇಂದು ದವನ್ ರ್‍ಯಾಂಕ್ ವಿಜೇತರಿಗೆ ಪುರಸ್ಕಾರ

ದವನ್ ಕಾಲೇಜಿನ ವಿಶ್ವವಿದ್ಯಾನಿಲಯದ ರ್‍ಯಾಂಕ್ ಪಡೆದ ವಿಜೇತ ವಿದ್ಯಾರ್ಥಿಗಳಿಗೆ ಇಂದು ಸಂಜೆ 4 ಗಂಟೆಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ. ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಬಾಪೂಜಿ ಬಿ-ಸ್ಕೂಲ್ ನಿರ್ದೇಶಕ ಡಾ. ಹೆಚ್.ವಿ. ಸ್ವಾಮಿ ತ್ರಿಭುವಾನಂದ ಪಾಲ್ಗೊಳ್ಳುವರು. ಕಾಲೇಜಿನ ಕಾರ್ಯದರ್ಶಿ ವೀರೇಶ್ ಪಟೇಲ್ ಉಪಸ್ಥಿತರಿರುವರು. ದವನ್ ಕಾಲೇಜಿನ ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು, ನಿರ್ದೇಶಕ ಹರ್ಷರಾಜ್ ಎ. ಗುಜ್ಜರ್, ಉಪ- ಪ್ರಾಚಾರ್ಯರಾದ ಎನ್. ಅನಿತಾ ಉಪಸ್ಥಿತರಿರುವರು.

# ಪ್ರವೀಣ್‌ಗೆ ಬಿಜೆಪಿ ಯುವ ಮೋರ್ಚಾದಿಂದ ಶ್ರದ್ಧಾಂಜಲಿ

**ಹರಿಹರ**



ಹರಿಹರ, ಜು. 27- ಹತ್ಯೆಗೀಡಾದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತ ಪ್ರವೀಣ್ ನೆಟ್ಟಾರ್ ಅವರಿಗೆ ಬಿಜೆಪಿ ಯುವ ಮೋರ್ಚಾ ವತಿಯಿಂದ ನಗರದ ಗಾಂಧಿ ವೃತ್ತದಲ್ಲಿ ಮೌನಾಚರಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಬಿಜೆಪಿ ಪಕ್ಷದ ಮಾಜಿ ಅಧ್ಯಕ್ಷ ಹಲಸಬಾಳು ಶಿವಾನಂದಪ್ಪ ಮಾತನಾಡಿ, ರಾಜ್ಯ ಸರ್ಕಾರ ಆರೋಪಿಗಳನ್ನು ಬಂಧಿಸಿ ಉಗ್ರ ಶಿಕ್ಷೆ ನೀಡಬೇಕು. ಮುಂದೆ ಇಂತಹ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರವಿ ರಾಯ್ಕರ್, ಜಿಲ್ಲಾ ಯುವ ಮೋರ್ಚಾ ಕಾರ್ಯದರ್ಶಿ ಅದ್ವೈತ ಶಾಸ್ತ್ರಿ, ಮುಖಂಡರಾದ ಚಂದ್ರಶೇಖರ್ ಪೂಜಾರ್, ಬಾತಿ ಚಂದ್ರಶೇಖರ್, ಅಜಿತ್ ಸಾವಂತ್, ಲಿಂಗರಾಜ್ ಹಿಂಡಸಘಟ್ಟ, ನಾಗರಾಜ್ ಭಂಡಾರಿ, ವರಪ್ರಸಾದ್, ಚಂದ್ರಕಾಂತ್, ರೂಪಾ ಕಾಟ್ವೆ, ಅಂಬುಜಾ ಪಿ ರಾಜೊಳ್ಳಿ, ಸುನಿಲ್, ಪ್ರಶಾಂತ್, ನಿರಂಜನ್ ದೀಟೂರು, ಬಿಜೆಪಿ ಶಿವಣ್ಣ, ರಾಘವೇಂದ್ರ ಹೆಚ್.ಎಸ್, ಶ್ರೀನಿವಾಸ್ ಚಂದಾಪೂರ್, ಸುಧಾ ಸೋಳಂಕಿ, ರಜನಿಕಾಂತ್, ಹನುಮಂತಪ್ಪ, ದಿನೇಶ್ ಇತರರು ಹಾಜರಿದ್ದರು.

# ರಾಣೇಬೆನ್ನೂರಿನಲ್ಲಿ ನಾಳೆ ಸಹಜ ಯೋಗ

ರಾಣೇಬೆನ್ನೂರು, ಜು. 27- ನಗರದ ಮೇಡ್ಲೇರಿ ರಸ್ತೆಯಲ್ಲಿರುವ ಆದಿಶಕ್ತಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 29ರ ಶುಕ್ರವಾರ ಸಂಜೆ 5ಕ್ಕೆ ಆತ್ಮ ಸಾಕ್ಷಾತ್ಕಾರ ಮತ್ತು ಸಾರ್ವಜನಿಕ ಕಾರ್ಯಕ್ರಮ ನಡೆಯಲಿದೆ ಎಂದು ಸಹಜ ಯೋಗ ಸಂಚಾಲಕ ಬಸವರಾಜ ಅಡಗಲ್ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಹಜ ಯೋಗದಿಂದ ನಮ್ಮಲ್ಲಿರುವ ಕುಂಡಲಿನಿ ಶಕ್ತಿ ಜಾಗೃತವಾಗಿ ಏಳು ಚಕ್ರಗಳನ್ನು ಭೇದಿಸಿಕೊಂಡು ಸರ್ವ ವ್ಯಾಪ್ತಿಯಾದ ಪರಮಾತ್ಮನನ್ನು ಮಿಲನ ಗೊಳ್ಳುತ್ತದೆ. ಮಾನ-ಅಪಮಾನ, ಸುಖ-ದುಃಖ, ನೋವು-ನಲಿವು ಇತರೆ ಪರಿಸ್ಥಿತಿಗಳಲ್ಲಿ ಸಮಭಾವವನ್ನು ಹೊಂದಿ ಮನಸ್ಸನ್ನು ಪ್ರಶಾಂತಗೊಳಿಸುವ ಸುಂದರ ಉಪಾಯವೇ ಸಹಜ ಯೋಗವಾಗಿದೆ ಎಂದು ತಿಳಿಸಿದರು.

ಅನಿಲ್‌ಕುಮಾರ ಕಲಾಲ, ತಿಪ್ಪೇಶ ಮುದೇನೂರ, ವಸಂತ ದೇಶಪಾಂಡೆ, ಪ್ರಸನ್ನ ಅನ್ನಿಸಕರ, ಸದಾನಂದ ಪಾಟೀಲ ಇತರರಿದ್ದರು.

# ಸಿಬಿಎಸ್‌ಸಿ: ಬಾಪೂಜಿ ಶಾಲೆಗೆ ಶೇ.100

ದಾವಣಗೆರೆ, ಜು.27- ಸಿಬಿಎಸ್‌ಸಿ 10ನೇ ತರಗತಿ ಪರೀಕ್ಷೆಯಲ್ಲಿ ಬಾಪೂಜಿ ಶಾಲೆಗೆ ಶೇ. 100 ಫಲಿತಾಂಶ ಲಭಿಸಿದೆ. 17 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 5 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 11 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, ಉತ್ತೀರ್ಣರಾಗಿರುತ್ತಾರೆ. ಐ.ಎಸ್. ಮೇಘನಾ ಎಂಬ ವಿದ್ಯಾರ್ಥಿನಿ 500 ಕ್ಕೆ 476 (95.2%) ಅಂಕ ಪಡೆದಿರುತ್ತಾಳೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

# ಎಪಿಎಂಸಿ ಅಡಿಕೆ ವರ್ತಕರಿಂದ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಣೆ



ದಾವಣಗೆರೆ, ಜು.27- ಎಪಿಎಂಸಿ ಅಡಿಕೆ ವರ್ತಕರಿಂದ ದಾವಣಗೆರೆ ಭಾಗದ ಜೀವಜಲ, ರೈತರ ಜೀವನಾಡಿ ಭದ್ರಾ ಜಲಾಶಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ, ಬಾಗಿನ ಅರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಅಡಿಕೆ ವರ್ತಕರಾದ ಬೇತೂರು ಎಂ.ಬಸವರಾಜಪ್ಪ, ಕುಕ್ಕುವಾಡ ಸುರೇಂದ್ರಪ್ಪ, ಬಿ.ಎನ್.ಟಿ ಸದಣ್ಣ, ರಾಮಗೊಂಡನಹಳ್ಳಿ ಜಯಣ್ಣ, ಲೋಕಿಕೆರೆ ರವಿ, ರಾಮಗೊಂಡನಹಳ್ಳಿ ಬಸವರಾಜಪ್ಪ, ಬೆಳ್ಳುಳ್ಳಿ ಗುರುಸ್ವಾಮಿ, ಬಾಡದ ಸೋಮಣ್ಣ, ಬನಶಂಕರಿ ಶಂಕ್ರಣ್ಣ, ಬೇತೂರು ಎಂ. ಷಡಕ್ಷರಪ್ಪ, ಯಲವಟ್ಟಿ ಅಣ್ಣಪ್ಪ ಹಾಗು ಇತರರು ಉಪಸ್ಥಿತರಿದ್ದರು.

# ನೆಟ್ಟಾರು ಹತ್ಯೆ : ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳ ಸಾಮೂಹಿಕ ರಾಜೀನಾಮೆ

ದಾವಣಗೆರೆ, ಜು. 27- ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಅವರನ್ನು ದುಷ್ಕರ್ಮಿಗಳು ಮಾರಣಾಂತಿಕವಾಗಿ ಹಲ್ಲೆ ನಡೆಸಿ, ಹತ್ಯೆಗೈದಿರುವುದರ ಹಿನ್ನೆಲೆಯಲ್ಲಿ ಬಿಜೆಪಿ ಮತ್ತು ಹಿಂದೂ ಯುವಕರ ಹತ್ಯೆಗಳು ನಡೆದಿದ್ದರೂ ಯಾವುದೇ ನ್ಯಾಯ ಸಿಗದ ಮತ್ತು ಕಠಿಣ ಕ್ರಮದ ಭರವಸೆ ಕೇವಲ ಭರವಸೆಯಾಗಿಯೇ ಉಳಿದಿರುವುದರಿಂದ ದಾವಣಗೆರೆ ಜಿಲ್ಲಾ ಯುವ ಮೋರ್ಚಾದ ಎಲ್ಲಾ ಪದಾಧಿಕಾರಿಗಳು ಸಾಮೂಹಿಕ ರಾಜೀನಾಮೆ ನೀಡುವುದಾಗಿ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಆರ್.ಎಲ್. ಶಿವಪ್ರಕಾಶ್ ತಿಳಿಸಿದ್ದಾರೆ.

ಬಿಜೆಪಿ ಕೇವಲ ಪಕ್ಷ ಮಾತ್ರವಲ್ಲ, ತನ್ನದೇ ಆದ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಸ್ಥಾಪಿತವಾದ ಹಿಂದೂ ಸಂಘಟನೆ. ಅನೇಕ ಮಹನೀಯರ ತ್ಯಾಗ, ಬಲಿದಾನಗಳನ್ನು ಮಾಡಿದ್ದರಿಂದ ಪಕ್ಷ ಬೃಹತ್ ಶಕ್ತಿಯಾಗಿ ಬೆಳೆದಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಬಿಜೆಪಿ ಮತ್ತು ಹಿಂದೂ ಕಾರ್ಯಕರ್ತರನ್ನು ಕೆಲವು ದುಷ್ಕರ್ಮಿಗಳು ಹತ್ಯೆ ಮಾಡುತ್ತಿರುವುದನ್ನು ನೋಡಿದರೆ, ಈಗಿನ ಬಿಜೆಪಿ ಸರ್ಕಾರವು ನಮ್ಮ ಹಿರಿಯರು ಹಾಕಿಕೊಟ್ಟ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಸ್ಥಾಪಿತವಾದ ಸರ್ಕಾರವೇ? ಎಂಬ ಸಂಶಯ ಬರುತ್ತಿದೆ ಎಂದು ತಿಳಿಸಿದ್ದಾರೆ.

## ಸಾಮೂಹಿಕ ರಾಜೀನಾಮೆ ತಿರಸ್ಕಾರ

ದಾವಣಗೆರೆ, ಜು. 27- ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರ್ ಹತ್ಯೆ ಖಂಡಿಸಿ ಸಲ್ಲಿಸಿದ್ದ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳ ಸಾಮೂಹಿಕ ರಾಜೀನಾಮೆಯನ್ನು ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ತಿರಸ್ಕರಿಸಿದ್ದಾರೆ.

ಸದೃಢ ದೇಶ ಕಟ್ಟಲು ಯುವಕರಿಗೆ ಮನವೊಲಿಸಿ, ಮುಂದಿನ ದಿನಗಳಲ್ಲಿ ಪಕ್ಷದ ಸಂಘಟನೆಯಲ್ಲಿ ಸಕ್ರಿಯವಾಗಿ ಮುಂದುವರೆಯಲು ಧೈರ್ಯ ಮತ್ತು ಉತ್ಸಾಹ ನೀಡಿ, ಜಿಹಾದಿ ಕೃತ್ಯವನ್ನು ಖಂಡಿಸಿ, ಪ್ರವೀಣ್ ನೆಟ್ಟಾರ್ ಆತ್ಮಕ್ಕೆ ಶಾಂತಿ ಸಿಗಲೆಂದು ಯುವಮೋರ್ಚಾದ ಕಾರ್ಯಕರ್ತರೊಂದಿಗೆ ಮೌನಾಚರಣೆ ಮಾಡಲಾಯಿತು.

ಸಭೆಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್ ಜಗದೀಶ್, ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಮಾಜಿ ಮಹಾಪೌರರಾದ ಎಸ್.ಟಿ ವೀರೇಶ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜಶೇಖರ್, ಶ್ರೀನಿವಾಸ ಭಟ್, ಯುವ ಮೋರ್ಚಾ ಅಧ್ಯಕ್ಷ ಆರ್.ಎಲ್ ಶಿವಪ್ರಕಾಶ್, ಮಹಾನಗರಪಾಲಿಕೆ ಸದಸ್ಯರು, ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ರೀಧರ್ ಹಾಲವರ್ತಿ, ಯಲ್ಲೇಶ್. ಜಿ, ಗುರುರಾಜ್ ಕೆ.ವಿ, ಕಿರಣ್, ಚಂದ್ರು, ನರೇಂದ್ರ, ರಾಕೇಶ್ ಭಜರಂಗಿ, ಸಚಿನ್, ರಾಕೇಶ್ ಕಲ್ಪನಳ್ಳಿ, ಅನಿಲ್, ಸಂತೋಷ್, ಹರೀಶ್ ಶಾಮನೂರು ಹಾಗೂ ಪಕ್ಷದ ಯುವ ಕಾರ್ಯಕರ್ತರು ಉಪಸ್ಥಿತರಿದ್ದರು.

**ಸೈಟ್ ಮಾರಾಟಕ್ಕೆ**
SHAMANUR DOLLERS COLONY
30X45 ಪೂರ್ವ 30X45 ವೆಸ್ಟ್
60X45 ಪೂರ್ವ 60X50 ಉತ್ತರ
30X50 ಉತ್ತರ 40X55 ಉತ್ತರ
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಪಾಳೆಯಕ್ಕೆ ರೂಂ ಬಾಯ್ ಮತ್ತು ಮಹಿಳಾ ಸ್ವೀಪರ್ ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
63639-54459

**ಜಮೀನುಗಳು ಮಾರಾಟಕ್ಕಿವೆ**
ಕೊಟ್ಟೂರು ರಸ್ತೆ, ಚಿಗಟೇರಿ ಸರ್ಕಲ್ ಹತ್ತಿರದ ಬೆಣ್ಣೆಹಳ್ಳಿ ಗ್ರಾಮದಲ್ಲಿರುವ 6 ಎಕರೆ ಕೆಂಪು ಖುಷ್ಕಿ ಜಮೀನು ಹಾಗೂ 3 ಎಕರೆ ಎರೆಹೊಲ ಬೆಣ್ಣೆಹಳ್ಳಿ ಗ್ರಾಮದಿಂದ ಬಲಕ್ಕೆ 2 ಕಿ.ಮಿ. ರಸ್ತೆಗೆ ಲಗತ್ತಾಗಿರುವ ಜಮೀನುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
Honnurswamy Vanjre
87926 04196

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
63647 83999

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಮಾಂಸಕೂಟದ ಅಡುಗೆ, ಉತ್ತರ ಭಾರತ ಶೈಲಿಯ ಅಡುಗೆ ತಂದೂರಿ ಭಟ್ಟರು, ಸಪ್ಲೈ ಮಾಡುವವರು ಬೇಕಾಗಿದ್ದಾರೆ.
ಫೋ. : 95354 44369

**ಬ್ಯೂಟಿಷಿಯನ್ ಕೆಲಸಕ್ಕೆ ಬೇಕಾಗಿದ್ದಾರೆ**
ನೇರ ಸಂದರ್ಶನ
ಕವಿತಾ'ಸ್ ಮೇಕಪ್ ಸ್ಟುಡಿಯೋ
ಉದಯ ಮಾರ್ಟ್ ಪಕ್ಕದ ರಸ್ತೆ, 8ನೇ ಕ್ರಾಸ್, ತರಳಬಾಳು ಬಡಾವಣೆ, ವಿದ್ಯಾನಗರ, ದಾವಣಗೆರೆ-5
91644 91190

**ಷೇರು ಬಾಂಡ್ ಕಳೆದಿದೆ**
ದಾವಣಗೆರೆ ತಾಲ್ಲೂಕು ಕನಗೊಂಡನಹಳ್ಳಿ ಗ್ರಾಮದ ಸಿ.ಎಂ. ಹನುಮಂತಪ್ಪ ಆದ ನಾನು ದಿನಾಂಕ 01.07.2022ರಂದು ಬೈಕ್ ಮೂಲಕ ದಾವಣಗೆರೆಗೆ ಹೋಗುವಾಗ ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಕುಕ್ಕುವಾಡ ಇಲ್ಲಿನ ಷೇರು ಬಾಂಡ್ ಸಂಖ್ಯೆ DASH 1215 ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗೆ ಸಂಪರ್ಕಿಸುವಂತೆ ಕೋರಿಕೊಳ್ಳುತ್ತೇನೆ.
ಮೊಬೈಲ್ : 7406954139

**ಬೇಕಾಗಿದ್ದಾರೆ**
ಜಿಮ್‌ನಲ್ಲಿ ಮ್ಯಾನೇಜ್‌ಮೆಂಟ್ ಮಾಡಲು ಯಾವುದೇ ಪದವಿ ಹೊಂದಿರುವ ಮಹಿಳಾ ಅಥವಾ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
ಆರೇಂಜ್ ಫಿಟ್ನೆಸ್
99728-25859

**ಬೇಕಾಗಿದ್ದಾರೆ**
C.P. Pharma
ಆಫೀಸ್ ವರ್ಕ್ ಮತ್ತು ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ವಯಸ್ಸು: 18 ರಿಂದ 30
ವಿಳಾಸ: BIET Collage Road, Near Bhadra Collage, Davangere.
84310 22744

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟೈಸರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
ಫೋ. : 97388 27452
74110 25934

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕುಕ್ ಬೇಕಾಗಿದ್ದಾರೆ. ಸಂಬಳ 12000 ರೂ. ಸಸ್ಯಹಾರಿ, ಮಾಂಸಹಾರಿ ಗೊತ್ತಿರಬೇಕು, ಊಟ, ರೂಂ ಉಚಿತ.
97400 98064, 97400 98047

**ಬೇಕಾಗಿದ್ದಾರೆ**
ಸ್ಟಾಫ್ ನರ್ಸ್ : GNM/ ANM
ಹರಿಹರದಲ್ಲಿ ಕೆಲಸ ಮಾಡಲು ನರ್ಸ್ ಬೇಕಾಗಿದ್ದಾರೆ.
97391 19466
95350 75273

**ಬೇಕಾಗಿದ್ದಾರೆ**
ರಿಸಪ್ಷನಿಷ್ಟ್
GNM/ ANM
ಆಯಾ/ ವಾರ್ಡ್ ಬಾಯ್
87468 36666

**Wanted**
Lab Instructor
B.Sc or PU Science passed candidate urgently required
84948 84444

**ಗ್ಯಾಸ್ ಗೀಜರ್, ವಾಟರ್ ಪ್ಯೂರಿಫೈಯರ್ ರಿಪೇರಿಗಾಗಿ**
ಗ್ಯಾಸ್ ಗೀಜರ್ & ವಾಟರ್ ಪ್ಯೂರಿಫೈಯರ್ ಖರೀದಿಗೆ
ಮರುತ್ ಸರ್ವೀಸ್ ಸೆಂಟರ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು ದಾವಣಗೆರೆ
98458 67574, 98451 58798

**ಷೇರು ಬಾಂಡ್ ಕಳೆದಿದೆ**
ದಾವಣಗೆರೆ ತಾಲ್ಲೂಕು ಕುಕ್ಕುವಾಡದಲ್ಲಿರುವ ದಾವಣಗೆರೆ ಶುಗರ್ ಕಂಪನಿಗೆ ಸೇರಿದ ಶ್ರೀ ರುದ್ರಸ್ವಾಮಿ ಬಿನ್ ನಾಗೇಂದ್ರಯ್ಯ ಇವರ ಹೆಸರಿನಲ್ಲಿರುವ ಷೇರ್ ಬಾಂಡ್ ಸಂಖ್ಯೆ CAF No. 223449 FOLIO DSR1088 ಇದು ಕಳೆದಿದ್ದು, ಸಿಕ್ಕವರು ಈ ವಿಳಾಸಕ್ಕೆ ಸಂಪರ್ಕಿಸಿ :
ಫೋ. : 91641 81988

**ಮಳಿಗೆಗಳು ಲೀಸ್‌ಗೆ ಇವೆ**
ಸಂಪರ್ಕಿಸಿ :
ಫೋ. : 96323 23213
95353 54747

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಬೇಕಾಗಿದ್ದಾರೆ**
ನುರಿತ ಟೈಲರಿಂಗ್ ಶಿಕ್ಷಕಿಯರು, ಕಂಪ್ಯೂಟರ್ ಶಿಕ್ಷಕಿಯರು, ವಾಹನ ಚಾಲಕರು, ಶಿಕ್ಷಕಿಯರು, ಆಫೀಸ್ ಕ್ಲರ್ಕ್ ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂಪರ್ಕಿಸಿ :
ಎಸ್.ಎನ್. ಪಬ್ಲಿಕ್ ಸ್ಕೂಲ್
B1 : ವಿಜಯನಗರ, ಆರ್.ಟಿ.ಓ.ಕಛೇರಿ ಎದುರು ಏರ್ ಟೆಲ್ ಹತ್ತಿರ, 3ನೇ ಕ್ರಾಸ್, ದಾವಣಗೆರೆ.
B2 : ಜೀಜಾಮಾತಾ ಕಾಲೋನಿ, ಹರ್ಲಾಪುರ, ಹರಿಹರ.
73493 97287, 97417 46205

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 03.08.2022ರ ಬುಧವಾರ ಮತ್ತು ದಿ.04.08.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಹೆಚ್ ಕೆ.ಬಿ.ಎನ್ ಎಗ್ ಸೆಂಟರ್**
ನಮ್ಮಲ್ಲಿ ಹೋಲ್‌ಸೇಲ್ ದರದಲ್ಲಿ ಮೊಟ್ಟೆಗಳು ದೊರೆಯುತ್ತವೆ. ಬೇಕರಿ, ಹೋಟೆಲ್, ಆಮ್ಲೇಟ್ ಸ್ಟಾಲ್, ಮತ್ತು ಕಿರಾಣಿ ಅಂಗಡಿಗಳಿಗೆ ಡೋರ್ ಡೆಲಿವರಿ ಕೊಡುತ್ತೇವೆ. ನಾವು ಶಾಲೆಗಳಿಗೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆಗಳನ್ನು ಹೋಲ್‌ಸೇಲ್ ದರದಲ್ಲಿ ನೀಡುತ್ತೇವೆ. ಕಳೆದ 25 ವರ್ಷಗಳಿಂದಲೂ ನಿಮ್ಮಗಳ ವಿಶ್ವಾಸ ಪೂರ್ಣ ಸೇವೆಯಲ್ಲಿದ್ದೇವೆ.
98862 09429, 77607 39030
99002 56658

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
Tally ಬಲ್ಲವರಿಗೆ ಆದ್ಯತೆ,
ರಾಮದೂತ ಎಂಟರ್ ಪ್ರೈಸಸ್
ಫೋ. : 97388 27452
74110 25934

**ಬೇಕಾಗಿದ್ದಾರೆ**
ಐಟಿಐ ಓದಿರುವ 20 ರಿಂದ 28 ವಯಸ್ಸಿನ ಹುಡುಗರು ಬೆಂಗಳೂರಿನಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ :
88844 11140

ನೇತ್ರ ದಾನ ಶ್ರೇಷ್ಠ ದಾನ

**ಪ್ರವೇಶ ಪ್ರಕಟಣೆ 2022-23**
ಹೆಲ್ತ್ ಇನ್ಸ್‌ಪೆಕ್ಟರ್ DHI
ಲ್ಯಾಬ್ ಟೆಕ್ನಾಲಜಿ DMLT
ಇಮೇಜಿಂಗ್ ಟೆಕ್ನಾಲಜಿ X-ray
ಆಪರೇಷನ್ ಟೆಕ್ನಾಲಜಿ DOT
ಡಿಪ್ಲೋಮೋ ಫಾರ್ಮಸಿ D pharm
ಕೆಲವೇ ಸೀಟುಗಳು ಮಾತ್ರ
ಎಲ್ಲ ವಿದ್ಯಾರ್ಥಿಗಳಿಗೂ ಸ್ಕಾಲರ್‌ಶಿಪ್ ಸೌಲಭ್ಯವಿದೆ, ಹಾಸ್ಟೆಲ್ ಸೌಲಭ್ಯವಿದೆ.
VS PARAMEDICAL COLLEGE, DAVANAGERE.
8553278258
9019580600

**WANTED In DAVANAGERE**
First Indian MNC is Looking for Business Development Managers / Leaders
Professional experience 5+ years, Age 30 +
For registration Call
98447 45856

**ನೆಲ ಬಾಡಿಗೆಗೆ**
3 ಮಳಿಗೆಗಳು ನೆಲ ಬಾಡಿಗೆಗೆ. ಉದ್ದ 14 ಅಡಿ x ಅಗಲ 13 ಅಡಿ ಎಸ್.ಎಸ್. ಲೇಔಟ್, ರಿಂಗ್ ರೋಡ್, ಶಾರದಾಂಬ ದೇವಸ್ಥಾನದ ಎದುರು, ದಾವಣಗೆರೆ.
ಫೋ. : 91135 10950

**ವಾಹನ ಚಾಲಕರು ಬೇಕಾಗಿದ್ದಾರೆ**
ಸ್ವಂತ ವಾಹನ ವೈಟ್ ಬೋರ್ಡ್
ಸಂಪರ್ಕಿಸಿ : ಶಂಕರಲೀಲಾ ಗ್ಯಾಸ್ ಏಜೆನ್ಸಿ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ.
99164-54770

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**SBI - CSP 'ಜನ್‌ಧನ್ ಖಾತೆ' ಮಾಡಲಾಗುತ್ತದೆ**
(10 ವರ್ಷ ಮೇಲಿನವರಿಗೆ)
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, # 264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : 99806 10005

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ವಧು - ವರ ಅನ್ವೇಷಣೆ**
Register Today 399/-
(Get Function Hall free)
Call Now:
83103 19628

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**ಸುಕ್ಷೇತ್ರ, ಗಾಣಗಟ್ಟೆ ಶ್ರೀ ಮಾಯಮ್ಮ ದೇವಿ ಜ್ಯೋತಿಷ್ಯಾಲಯ**
ಪಂಡಿತ್ ಶ್ರೇಯಸ್ ಭಟ್ - 81232 83279
ಇವರು ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಹಣಕಾಸಿನ ಸಮಸ್ಯೆ, ಲೈಂಗಿಕ, ಸಂತಾನ, ವಶೀಕರಣ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ವಿ. ಸೂ : ನಿಮ್ಮ ಕೆಲಸ ಆಗದಿದ್ದಲ್ಲಿ ಹಣ ವಾಪಸ್ ನೀಡಲಾಗುವುದು.
ವಿಳಾಸ : ಹಳೇ ಆರ್.ಟಿ.ಓ ಆಫೀಸ್ ಹತ್ತಿರ, ಅಯ್ಯಪ್ಪ ಸ್ವಾಮಿ ದೇವಸ್ಥಾನ ಹಿಂಭಾಗ, ಬಿ.ಐ.ಇ.ಟಿ. ಕಾಲೇಜ್ ರಸ್ತೆ, ದಾವಣಗೆರೆ.

**MBBS**
Aspirants Looking For MBBS Admission in Russia With Minimum Criteria and Low Budget, Call or Visit
+91 7022 321 123
Doctors Query Pvt Ltd., www.doctorsquery.com

**WANTED**
Experienced Tution teacher for 9th standard CBSE who can come home & teach.
88845 64642

## ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ಶ್ರಾವಣ ಮಾಸದ ಪುರಾಣ ಪ್ರಾರಂಭ

ದಾವಣಗೆರೆ, ಜು.27- ಬಾಡಾ ಕ್ರಾಸ್, ಶ್ರೀ ಗುರು ಪುಟ್ಟ ರಾಜನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ದಿನಾಂಕ 29ರಿಂದ ಆಗಸ್ಟ್ 28 ರವರೆಗೆ ಶ್ರಾವಣ ಮಾಸದ ಪ್ರಯುಕ್ತ ಪುರಾಣ, ಪ್ರವಚನ ನಡೆಯಲಿದೆ.

ಶ್ರೀ ಕಲ್ಲಯ್ಯಜ್ಜನವರ ನಿರ್ದೇಶನದ ಮೇರೆಗೆ ಲಿಂ. ಡಾ. ಪಂಡಿತ ಪುಟ್ಟರಾಜ ಕವಿಗವಾಯಿ ವಿರಚಿತ 'ಮಹಾದಾಸೋಹಿ ಕಲ್ಬುರ್ಗಿ ಶ್ರೀ ಶರಣಬಸವೇಶ್ವರ' ಮಹಾಪುರಾಣ ಪ್ರವಚನ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯಸಾನ್ನಿಧ್ಯದಲ್ಲಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯ ವೇ. ಶಿವಬಸಯ್ಯ ಶಾಸ್ತ್ರಿಗಳು (ಚಿರಂತಿಮಠ, ಕಾಡಶೆಟ್ಟಿಹಳ್ಳಿ) ಇವರಿಂದ ಪ್ರವಚನ ನಡೆಯುವುದು.

ಮುಖ್ಯ ಅತಿಥಿಗಳಾಗಿ ಅಥಣಿ ವೀರಣ್ಣ, ಎ.ಹೆಚ್. ಶಿವಮೂರ್ತಿಸ್ವಾಮಿ ಭಾಗವಹಿಸುವರು. ಸಂಗೀತ ಸೇವೆ : ಸಿದ್ದು ರಾಯಭಾಗ್ ಮತ್ತು ಗಿರೀಶ್ ಮುಂಡರಗಿ. ಹಾರ್ಮೋನಿಯಂ : ಕು. ಭಾಗ್ಯವಂತ ಗುಲ್ಬರ್ಗಾ. ತಬಲಾ ಸೇವೆ : ಕು. ಯಲಗೂರೇಶ್, ಕು ರಾಜು ಮೂಲಗಿ, ಕು. ಕಿರಣ್.

## ನಂದಿಗುಡಿ : 30ಕ್ಕೆ ಆರೋಗ್ಯ ತಪಾಸಣೆ

ಮಲೇಬೆನ್ನೂರು, ಜು.27- ನಂದಿಗುಡಿ ಬೃಹನ್ಮಠದ ಸಮುದಾಯ ಭವನದಲ್ಲಿ ಇದೇ ದಿನಾಂಕ 30 ರ ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆ ಮತ್ತು ಚಂದ್ರಶೇಖರ್ ಪೂಜಾರ್ ಅಭಿಮಾನಿ ಬಳಗ ಹಾಗೂ ಮಲೇಬೆನ್ನೂರಿನ ಶ್ರೀ ನಂದಿ ಸೌಹಾರ್ದ ಸಹಕಾರಿ ನಿ. ಇವರ ಸಂಯುಕ್ತಾಶ್ರಯದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷ ಜಿಗಳಿ ಇಂದೂಧರ್ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಶಿಬಿರ ಉದ್ಘಾಟಿಸಲಿದ್ದಾರೆ.

**ರಂಗೋಲಿ ಸ್ಪರ್ಧೆ :** ಶ್ರೀ ನಂದಿ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಅಂಗವಾಗಿ ಮಹಿಳಾ ಸದಸ್ಯರಿಗೆ ಜು. 30 ರ ಶನಿವಾರ ಮಧ್ಯಾಹ್ನ 1 ಗಂಟೆಗೆ ರಂಗೋಲಿ ಸ್ಪರ್ಧೆ ಹಾಗೂ ಚಮಚ ನಿಂಬೆಹಣ್ಣಿನ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಶ್ರೀಮತಿ ಶೋಭಾ ಬಿ.ಜಿ. ಪಾಲಾಕ್ಷಪ್ಪ ತಿಳಿಸಿದ್ದಾರೆ.

## ಮಂಕಿಪಾಕ್ಸ್ ವೈರಸ್ ಪ್ರತ್ಯೇಕಗೊಳಿಸುವಲ್ಲಿ ಯಶಸ್ಸು

ನವದೆಹಲಿ ಜು. 27 – ಮಂಕಿಪಾಕ್ಸ್ ವೈರಸ್ ಅನ್ನು ಪ್ರತ್ಯೇಕಗೊಳಿಸುವಲ್ಲಿ ಐ.ಸಿ.ಎಂ.ಆರ್. ಯಶಸ್ವಿಯಾಗಿದೆ. ಇದು ಸೋಂಕಿನ ಪರೀಕ್ಷಾ ಕಿಟ್ ರೂಪಿಸಲು ಹಾಗೂ ಲಸಿಕೆ ರೂಪಿಸಲು ನೆರವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವೈರಸ್ ಪ್ರತ್ಯೇಕಗೊಳಿಸಿರುವ ಹಿನ್ನೆಲೆಯಲ್ಲಿ ಲಸಿಕೆ ಉತ್ಪಾದಕರು ಹಾಗೂ ಪರೀಕ್ಷಾ ಕಿಟ್ ಉತ್ಪಾದಕರು ಈ ದಿಸೆಯಲ್ಲಿ ಆಸಕ್ತಿ ತೋರುವಂತೆ ಐ.ಸಿ.ಎಂ.ಆರ್. ಹೇಳಿದೆ.

ಭಾರತದಲ್ಲಿ ಇದುವರೆಗೂ ಮಂಕಿ ಪಾಕ್ಸ್‌ನ 4 ಪ್ರಕರಣಗಳು ಕಂಡು ಬಂದಿವೆ.

## ಮೂರು ಗಂಟೆ ಕಾಲ ಸೋನಿಯಾ ವಿಚಾರಣೆ

ನವದೆಹಲಿ, ಜು. 27 – ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ ಮೂರು ಗಂಟೆ ಕಾಲ ವಿಚಾರಣೆಗೆ ಒಳಪಡಿಸಿದೆ. ಮತ್ತೆ ವಿಚಾರಣೆಗೆ ಹಾಜರಾಗಲು ಅವರಿಗೆ ಸಮನ್ಸ್ ಕಳಿಸಿಲ್ಲ. ಇದರೊಂದಿಗೆ ವಿಚಾರಣೆ ಮುಗಿಸಿರುವ ಸೂಚನೆ ದೊರೆತಿದೆ. ಮೂರು ದಿನಗಳಲ್ಲಿ ಒಟ್ಟಾರೆ 11 ಗಂಟೆ ಕಾಲ ಅವರನ್ನು ಪ್ರಶ್ನಿಸಲಾಗಿದೆ.

# ವಿಶ್ವವಿದ್ಯಾನಿಲಯದ ಶೈಕ್ಷಣಿಕ ಉನ್ನತಿಗೆ ಆದ್ಯತೆ

## ದಾವಣಗೆರೆ ವಿಶ್ವವಿದ್ಯಾನಿಲಯದ ನೂತನ ಕುಲಪತಿ ಪ್ರೊ.ಬಿ.ಡಿ.ಕುಂಬಾರ



ದಾವಣಗೆರೆ, ಜು.27- ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು, ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿಗೆ ಆದ್ಯತೆ ನೀಡುವ ಮೂಲಕ ದಾವಣಗೆರೆ ವಿಶ್ವವಿದ್ಯಾನಿಲಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ನೂತನ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಹೇಳಿದರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಬುಧವಾರ ಏರ್ಪಡಿಸಿದ್ದ ಸ್ವಾಗತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನನ್ನ ಮೂರು ದಶಕಗಳ ಬೋಧನೆ ಮತ್ತು ಆಡಳಿತದ ಅನುಭವವನ್ನು ಬಳಸಿಕೊಂಡು ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ವಾತಾವರಣ ರೂಪಿಸಲಾಗುವುದು ಎಂದು ಭರವಸೆ ನೀಡಿದರು.

ವಿದ್ಯಾರ್ಥಿಗಳ ಏಳ್ಗೆಯಲ್ಲಿ, ಅವರ ಉತ್ತಮ ಭವಿಷ್ಯದಲ್ಲಿ ಬೋಧಕರ ಯಶಸ್ಸು ನಿರ್ಧಾರವಾಗುವುದು. ಬೋಧನೆ, ಸಂಶೋಧನೆ ಮತ್ತು ಕ್ಷೇತ್ರ ಕಾರ್ಯಗಳ ಮೂಲಕ ಮಕ್ಕಳಿಗೆ ವಿಭಿನ್ನ ಆಲೋಚನೆಗಳೊಂದಿಗೆ ಬೋಧನೆ ಮಾಡಲು ಗಮನ ನೀಡಬೇಕು. ಬೋಧಕರು ತಮ್ಮ ವೃತ್ತಿಯಲ್ಲಿ ಬೋಧನಾ ತಂತ್ರಗಳನ್ನು ಅಳವಡಿಸಿಕೊಂಡು ಪರಿಣಿತಿ ಸಾಧಿಸಿದರೆ, ಮನ್ನಣೆ ನೀಡಿದರೆ ಅವಕಾಶಗಳು ತೆರೆದುಕೊಳ್ಳುತ್ತವೆ. ಆ ನಿಟ್ಟಿನಲ್ಲಿ ಬೋಧಕರು ಆದ್ಯತೆ ನೀಡಿ ವೈಯಕ್ತಿಕವಾಗಿ ಬೆಳೆಯುವ ಜೊತೆಗೆ ವಿಶ್ವವಿದ್ಯಾನಿಲಯವನ್ನು ಗುರುತಿಸುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಸಿಬ್ಬಂದಿಯಲ್ಲೂ ಕರ್ತವ್ಯ ಪ್ರಜ್ಞೆ, ಪ್ರಾಮಾಣಿಕತೆ ಅತ್ಯವಶ್ಯ. ಎಲ್ಲರೂ ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಿದರೆ ಸಂಸ್ಥೆಯ ಬೆಳವಣಿಗೆ ಸಾಧ್ಯ. ದಾವಣಗೆರೆ ವಿಶ್ವವಿದ್ಯಾನಿಲಯದ ಹಿಂದಿನ ಕುಲಪತಿಗಳು ಉತ್ತಮ ಬುನಾದಿ ಹಾಕಿಕೊಟ್ಟಿದ್ದಾರೆ. ಅವರೆಲ್ಲರ ಪ್ರಯತ್ನದಿಂದ ವಿಶ್ವವಿದ್ಯಾನಿಲಯವು ಶೈಕ್ಷಣಿಕವಾಗಿ ಉತ್ತಮ ಸ್ಥಾನ ಪಡೆಯಲು ಕಾರಣವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಬೆಳವಣಿಗೆಗೆ ಗಮನ ನೀಡಲಾಗುವುದು ಎಂದು ತಿಳಿಸಿದರು.

ಪರೀಕ್ಷಾಂಗ ಕುಲಸಚಿವ ಡಾ. ಕೆ.ಶಿವಶಂಕರ್ ಮಾತನಾಡಿ, ತಂತ್ರಜ್ಞಾನದ ಮೂಲಕ ಪರೀಕ್ಷಾ ಕಾರ್ಯ ಹಾಗೂ ಮೌಲ್ಯಮಾಪನಗಳನ್ನು ಸುಲಭಗೊಳಿಸಿದ್ದಲ್ಲದೆ, ವೇಗವಾಗಿ ಫಲಿತಾಂಶ ಪ್ರಕಟಿಸಿದ ಕೀರ್ತಿ ದಾವಣಗೆರೆ ವಿಶ್ವವಿದ್ಯಾನಿಲಯಕ್ಕಿದೆ. ಇನ್ನೂ ಹೆಚ್ಚಿನ ಸುಧಾರಣೆ ಮೂಲಕ ಸರಳೀಕೃತ ವ್ಯವಸ್ಥೆ ರೂಪಿಸಲು ಆದ್ಯತೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಹಂಗಾಮಿ ಕುಲಪತಿಯಾಗಿ ಕಾರ್ಯ ನಿರ್ವಹಿಸಿದ ಪ್ರೊ.ಪಿ.ಲಕ್ಷ್ಮಣ ಅವರನ್ನು ಸನ್ಮಾನಿಸಲಾಯಿತು. ಕುಲಸಚಿವೆ ಸರೋಜ ಬಿ.ಬಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಣಕಾಸು ಅಧಿಕಾರಿ ಡಿ.ಪ್ರಿಯಾಂಕ, ಸಿಂಡಿಕೇಟ್ ಸದಸ್ಯೆ ವಿಜಯಲಕ್ಷ್ಮಿ ಹಿರೇಮಠ, ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಡಾ. ಬಣಕಾರ, ವಿಜ್ಞಾನ ನಿಕಾಯದ ಡೀನ್ ಪ್ರೊ. ರಾಮಲಿಂಗಪ್ಪ ಉಪಸ್ಥಿತರಿದ್ದರು. ಕಲಾ ನಿಕಾಯದ ಡೀನ್ ಪ್ರೊ. ವೆಂಕಟರಾವ್ ಪಲಾಟೆ ಸ್ವಾಗತಿಸಿದರು. ಶಿಕ್ಷಣ ನಿಕಾಯದ ಡೀನ್ ಡಾ.ಕೆ.ವೆಂಕಟೇಶ್ ವಂದಿಸಿದರು. ಡಾ. ಭೀಮಾಶಂಕರ ಜೋಶಿ ಕಾರ್ಯಕ್ರಮ ನಿರೂಪಿಸಿದರು.

# ದೇಶದ ಸಮಗ್ರ ಅಭಿವೃದ್ಧಿ ಯುವ ಶಕ್ತಿಯಿಂದ ಸಾಧ್ಯ



## ದಾವಣಗೆರೆ ವಿವಿಯಲ್ಲಿ ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ವೀರೇಶಾನಂದ ಸರಸ್ವತಿ ಸ್ವಾಮೀಜಿ

ದಾವಣಗೆರೆ, ಜು.27- ದೇಶದ ಏಕತೆ, ಭದ್ರತೆ ಮತ್ತು ಸಮಗ್ರ ಅಭಿವೃದ್ಧಿ ಯುವಶಕ್ತಿಯಿಂದ ಮಾತ್ರ ಸಾಧ್ಯ. ಅವರಲ್ಲಿರುವ ಸಾಮರ್ಥ್ಯ, ಕೌಶಲ್ಯಗಳನ್ನು ಬಳಸಿಕೊಂಡು ಭರವಸೆಯ ಭಾರತ ನಿರ್ಮಾಣಕ್ಕೆ ಸಜ್ಜಾಗಬೇಕು ಎಂದು ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ ಸಲಹೆ ನೀಡಿದರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಬುಧವಾರ ಏರ್ಪಡಿಸಿದ್ದ 'ಬಲಿಷ್ಠ ರಾಷ್ಟ್ರ ನಿರ್ಮಾಣದಲ್ಲಿ ಯುವ ಜನತೆಯ ಪಾತ್ರ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಸಾತ್ವಿಕ ಮೌಲ್ಯ, ಸಾಮಾಜಿಕ ಜವಾಬ್ದಾರಿಯು ಯುವಜನರ ಶಕ್ತಿಯಾಗಿದೆ. ಸದೃಢ ದೇಶ ಕಟ್ಟಲು ಸ್ವಾಮಿ ವಿವೇಕಾನಂದರ ಸಕಾರಾತ್ಮಕ ಚಿಂತನೆಗಳು ಸಹಕಾರಿಯಾಗಿವೆ ಎಂದು ನುಡಿದರು.

ಭೂ ಪ್ರಪಂಚ ಚಿಕ್ಕದು. ಆದರೆ ಭಾವ ಪ್ರಪಂಚದ ವಿಸ್ತಾರ ಬಹುದೊಡ್ಡದು. ಭಾವನಾತ್ಮಕ ಸಂಬಂಧ, ಆತ್ಮೀಯತೆ ಹಾಗೂ ಸಕಾರಾತ್ಮಕ ಚಿಂತನೆಗಳ ಮೂಲಕ ಸುಂದರ ಸಮಾಜ ನಿರ್ಮಿಸಲು ಸಾಧ್ಯ. ಸ್ವಾಮಿ ವಿವೇಕಾನಂದರು ಕಟ್ಟಲು ಬಯಸಿದ ಸ್ವಾಭಿಮಾನಿ ಯುವಜನರ ಸದೃಢ ದೇಶವು ಇಡೀ ಜಗತ್ತಿಗೇ ಮಾದರಿಯಾಗಿದೆ. ಅವರ ಚಿಂತನೆಗಳು ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಣೆಯಾಗಿದ್ದವು. ಪ್ರಸ್ತುತ ಸಂದರ್ಭದಲ್ಲಿ ಅವುಗಳ ಸಮರ್ಪಕ ಅನುಷ್ಠಾನ ಅತ್ಯಗತ್ಯ ಎಂದು ತಿಳಿಸಿದರು.

ದೇಶವನ್ನು ಮೂರು ಹಂತಗಳಲ್ಲಿ ಕಟ್ಟಬೇಕಾಗಿದೆ. ಜ್ಞಾನ, ಸಂಘಟನೆ ಮತ್ತು ಅಭಿವೃದ್ಧಿಪರ ಚಿಂತನೆಯ ಕಾರ್ಯ ಯೋಜನೆಗಳು ದೇಶವನ್ನು ಸದೃಢವಾಗಿಡಲು ನೆರವಾಗುತ್ತವೆ. ಯುವಜನರಿಗೆ ಉತ್ತಮ ಜ್ಞಾನ, ಸಾಮಾಜಿಕ ಜವಾಬ್ದಾರಿಯನ್ನು ನೀಡಬೇಕಾಗಿದೆ. ಉತ್ತಮ ಆಲೋಚನೆಗಳನ್ನು ಬಿತ್ತುವ ಸಂಘಟನೆ ಮೂಲಕ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಸುವ ಮಾರ್ಗದರ್ಶನ ಅತ್ಯಗತ್ಯ ಎಂದು ಹೇಳಿದರು.

ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅಧ್ಯಕ್ಷತೆ ವಹಿಸಿದ್ದರು. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟಗಾರರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅವರ ತ್ಯಾಗ, ಬಲಿದಾನ ಮತ್ತು ಸ್ವಾಭಿಮಾನಿ ಸಂಘಟಿತ ಹೋರಾಟದ ಫಲವಾಗಿ ಭಾರತ ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಗಲು ಸಾಧ್ಯವಾಗಿದೆ. ಹಿರಿಯರು ದೊರಕಿಸಿಕೊಟ್ಟ ಸ್ವಾತಂತ್ರ್ಯವನ್ನು ಸುಭದ್ರ, ಸುಸ್ಥಿರ ರಾಷ್ಟ್ರವನ್ನಾಗಿ ರೂಪಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಪರೀಕ್ಷಾಂಗ ಕುಲಸಚಿವ ಡಾ.ಕೆ.ಶಿವಶಂಕರ್ ಉಪಸ್ಥಿತರಿದ್ದರು. ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಅಶೋಕ್‌ಕುಮಾರ ಪಾಳೇದ ಪ್ರಾಸ್ತಾವಿಕವಾಗಿ ಮಾತನಾಡಿದರು. ನೋಡಲ್ ಅಧಿಕಾರಿ ಡಾ. ಸತ್ಯನಾರಾಯಣ ಸ್ವಾಗತಿಸಿದರು. ಎಂಬಿಎ ವಿಭಾಗದ ಪ್ರಾಧ್ಯಾಪಕ ಡಾ. ಆರ್. ಶಶಿಧರ ವಂದಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಎಚ್. ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

# ಮಹಿಳಾ ರೋಗಿಯ ಜೀವ ಹಾನಿ ಖಾಸಗಿ ಆಸ್ಪತ್ರೆ ವಿರುದ್ಧ ಕ್ರಮಕ್ಕೆ ಆಗ್ರಹ



ದಾವಣಗೆರೆ, ಜು.27- ಚಿಕಿತ್ಸೆಗೆಂದು ಹೋದ ಮಹಿಳಾ ರೋಗಿಯ ಜೀವಕ್ಕೆ ಹಾನಿಯುಂಟು ಮಾಡಿ, ಕುಟುಂಬಕ್ಕೆ ಯಾವುದೇ ಪರಿಹಾರ ನೀಡದ ಖಾಸಗಿ ಆಸ್ಪತ್ರೆಯ ವೈದ್ಯರ ಲೈಸೆನ್ಸ್ ಹಾಗೂ ಆಸ್ಪತ್ರೆಯನ್ನು ಬಂದ್ ಮಾಡುವಂತೆ ಆಗ್ರಹಿಸಿ ನಗರದಲ್ಲಿಂದು ರಾಷ್ಟ್ರೀಯ ಪ್ರಬುದ್ಧ ಸೇನೆಯ ಜಿಲ್ಲಾ ಸಮಿತಿ ಪ್ರತಿಭಟನೆ ನಡೆಸಿತು.

ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಅನಿರ್ದಿಷ್ಟ ಧರಣಿ ನಡೆಸಿದ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಅವರ ಮುಖೇನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ ಆಯುಕ್ತರಿಗೆ ಮನವಿ ಸಲ್ಲಿಸಿದರು.

ನಗರದ ಜಯನಗರದ ಅನ್ನಪೂರ್ಣಮ್ಮ (65) ಎಂಬುವರು ಹೊಟ್ಟೆನೋವು ಎಂದು ನಗರದ ಖಾಸಗಿ ಆಸ್ಪತ್ರೆಗೆ ದಾಖಲಾದಾಗ, ವೈದ್ಯರು ಅವರನ್ನು ಪರಿಕ್ಷೀಸಿ, ಚಿಕ್ಕ ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ಹೇಳಿ ಅವೈಜ್ಞಾನಿಕವಾಗಿ ಶಸ್ತ್ರಚಿಕಿತ್ಸೆ ಮಾಡಿ ಹೊಟ್ಟೆಯ ಮೇಲ್ಭಾಗದ ಮಾಂಸವನ್ನು ಕಿತ್ತು ಹಾಕಿದ್ದಲ್ಲದೇ, ಆ ಜಾಗದಲ್ಲಿ ಹೊಲಿಗೆ ಹಾಕಲು ಆಗದಿದ್ದರಿಂದ ಹತ್ತಿ ತುಂಬಿ ಬ್ಯಾಂಡೇಜ್ ಸುತ್ತಿ ಮನೆಗೆ ಕಳುಹಿಸಿದ್ದರು. ಕೆಲವು ದಿನಗಳ ನಂತರ ಡ್ರೆಸಿಂಗ್ ಗೆಂದು ಆಸ್ಪತ್ರೆಗೆ ಬಂದಾಗ ವೈದ್ಯರು ಮಾಡಿರುವ ಯಡವಟ್ಟಿನ ಬಗ್ಗೆ ಸಂಬಂಧಿಕರಿಗೆ ತಿಳಿದಿದೆ. ವೈದ್ಯರು ತಮ್ಮ ಚಾಣಾಕ್ಷತನದ ಬುದ್ಧಿಯನ್ನು ಉಪಯೋಗಿಸಿ ರೋಗಿಯು ಬದುಕುವುದಿಲ್ಲ ಎಂಬ ಅರಿವು ಆದಾಗ ರೋಗಿಯ ಮೆದುಳು ನಂಜಾಗಿದೆ ಹಾಗೂ ಕಿಡ್ನಿಗಳು ಕೂಡ ನಂಜಾಗಿವೆ ಎಂದು ಬೇಜವಾಬ್ದಾರಿತನದ ಉತ್ತರ ನೀಡಿರುವುದಾಗಿ ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಸೇನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಿ.ಎಲ್. ಅವಿನಾಶ್, ರಾಜ್ಯ ಸಂಚಾಲಕ ಮಂಜಪ್ಪ ನೀತಿಗೆರೆ, ಜಿಲ್ಲಾಧ್ಯಕ್ಷ ಎಂ. ರಮೇಶ್, ಹನುಮಂತರಾಯ, ಹನುಮಂತಪ್ಪ ಸೇರಿದಂತೆ, ಇತರರು ಇದ್ದರು.

## ಸಾರ್ವಜನಿಕ ಆಸ್ತಿ ಕಬಳಿಸಲು ಬಿಜೆಪಿ ಹೊಂಚು

ದಾವಣಗೆರೆ, ಜು.27- ಎಂಸಿಸಿ 'ಬಿ' ಬ್ಲಾಕ್‌ನಲ್ಲಿ 25 ಕೋಟಿ ಮೌಲ್ಯದ ಸಾರ್ವಜನಿಕ ಆಸ್ತಿಯನ್ನು ಕಬಳಿಸಲು ಬಿಜೆಪಿಯವರು ಹೊಂಚು ಹಾಕುತ್ತಿದ್ದು, ಪಾಲಿಕೆ ಸಭೆಯಲ್ಲಿ ಅನುಮೋದನೆ ಪಡೆಯಲು ಯತ್ನಿಸುತ್ತಿದೆ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶವನ್ನು ಕಟ್ಟಿದ್ದು ಕಾಂಗ್ರೆಸ್. ಆದರೆ ಆ ದೇಶವನ್ನು ಲೂಟಿ ಮಾಡುತ್ತಿರುವುದು ಬಿಜೆಪಿ ಎಂದು ಆರೋಪಿಸಿದರು. ಆರ್‌ಎಸ್‌ಎಸ್‌ಗೆ ರಾಷ್ಟ್ರಧ್ವಜದ ಪರ ಮಾತನಾಡುವ ನೈತಿಕ ಹಕ್ಕಿಲ್ಲ. ನಾಗಪುರದ ಕಚೇರಿಯಲ್ಲೇ ರಾಷ್ಟ್ರಧ್ವಜ ಹಾರಿಸಿಲ್ಲ. ಆರ್‌ಎಸ್‌ಎಸ್‌ನವರು ಗಾಂಧೀಜಿಯವರ ಜೊತೆ ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿಲ್ಲ. ಚುನಾವಣೆಯ ಸಮಯದಲ್ಲಿ ಬಿಜೆಪಿಯವರ ಮನೆಯ ಮೇಲೆ ರಾಷ್ಟ್ರಧ್ವಜ ಹಾರಿಸಲು ಹೇಳಿ ಜನರಿಗೆ ಮಂಕುಬೂದಿ ಎರಚುತ್ತಿದೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಮಹಮ್ಮದ್ ಜಿಕ್ರಿಯಾ, ಕೆ.ಎಂ. ಮಂಜುನಾಥ್, ಡಿ. ಶಿವಕುಮಾರ್, ಬಿ.ಹೆಚ್. ಉದಯ್‌ಕುಮಾರ್, ಮುಬಾರಕ್ ಇದ್ದರು.

## ಸೃಷ್ಟಿಯತ್ತ ಗಮನ ಹರಿಸಲಿ

**(3ನೇ ಪುಟದಿಂದ)** ಜೀವನವನ್ನು ಕಾಡುವ ದುಃಖವನ್ನು ನಿವಾರಿಸುತ್ತದೆ. ಯಾರು ಶಾಂತಿ-ಸಹನೆಯನ್ನು ಶಿವಯೋಗದಂತಹ ಮಾರ್ಗ ದಿಂದ ಸಾಧಿಸುತ್ತಾರೋ ಅವರು ತಮ್ಮ ಜೀವನದಲ್ಲಿ ಸಾಧನೆ ಮಾಡುತ್ತಾ ಸಾಗುತ್ತಾರೆ ಎಂದು ಹೇಳಿದರು.

ತಿಪಟೂರು ಷಡಕ್ಷರ ಮಠದ ಶ್ರೀ ರುದ್ರಮುನಿ ಸ್ವಾಮೀಜಿ, ಸಾಹಿತಿ ರಂಜಾನ್ ದರ್ಗಾ ಮಾತನಾಡಿದರು. ಶ್ರೀ ಬಸವಪ್ರಭು ಸ್ವಾಮೀಜಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

## ನಗರದಲ್ಲಿ ಇಂದು ಶಿವಾನುಭವ ಸಂಪದ

ಶ್ರೀ ಅನ್ನದಾನೀಶ್ವರ ಮಠದಲ್ಲಿ ಶಿವಾನುಭವ ಸಂಪದ ಮತ್ತು ಅಕ್ಕನ ಬಳಗದ ಉದ್ಘಾಟನಾ ಸಮಾರಂಭವು ಇಂದು ಸಂಜೆ 6.30 ಕ್ಕೆ ನಡೆಯುವುದು. ಸಾನ್ನಿಧ್ಯವನ್ನು ಶ್ರೀ ಅಭಿನವ ಅನ್ನದಾನ ಸ್ವಾಮೀಜಿ ವಹಿಸುವರು. ಸಾನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸುವರು.

ಕಾರ್ಯಕ್ರಮವನ್ನು ಶ್ರೀಮತಿ ಜಸ್ಟಿನ್ ಡಿ ಸೌಜಾ ಉದ್ಘಾಟಿಸುವರು. ಶ್ರೀಮತಿ ಮಂಗಳ ವೀರಪ್ಪ ಬಾವಿ ಅಧ್ಯಕ್ಷತೆ ವಹಿಸುವರು. ಉಪನ್ಯಾಸಕರಾದ ಶ್ರೀಮತಿ ಸುಮತಿ ಜಯ್ಯಪ್ಪ ಉಪನ್ಯಾಸ ನೀಡುವರು.

## ಅನುತ್ತೀರ್ಣಗೊಂಡ ವಾಣಿಜ್ಯ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ತರಬೇತಿ

ದಾವಣಗೆರೆ, ಜು. 27- ನಗರದ ರಂಜಿತ್‌ಮಲ್ ಗಾಂಧಿ ಎಜುಕೇಷನಲ್ ಟ್ರಸ್ಟ್ ವತಿಯಿಂದ 2022ರ ಸಾಲಿನಲ್ಲಿ ವಾಣಿಜ್ಯ ವಿಭಾಗದ ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಇದೇ ದಿನಾಂಕ 29ರಂದು ಮಧ್ಯಾಹ್ನ 2 ಗಂಟೆಗೆ ಉಚಿತ ತರಬೇತಿ ತರಗತಿಗಳನ್ನು ಆಯೋಜಿಸಲಾಗಿದೆ.

ನಗರದ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು ಎಂದು ಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಪ್ರೊ. ಪಿ.ಎಸ್. ಶಿವಪ್ರಕಾಶ್ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ವೇತಾ ಆರ್. ಗಾಂಧಿ ತಿಳಿಸಿದ್ದಾರೆ. ಮಾಹಿತಿಗಾಗಿ ಆರ್. ನರೇಂದ್ರ (86187 75339) ಹಾಗೂ ಬಿ.ಟಿ. ರಶ್ಮಿ (98442 40247) ಇವರನ್ನು ಸಂಪರ್ಕಿಸಬಹುದಾಗಿದೆ.

## ಜಗಳೂರು: ವಿಷದ ಬಳ್ಳಿ ತಿಂದು 20 ಕುರಿಗಳ ಸಾವು

ಜಗಳೂರು, ಜು.27- ತಾಲ್ಲೂಕಿನ ಜಗಳೂರು ಗೊಲ್ಲರಹಟ್ಟಿ ಗ್ರಾಮದಲ್ಲಿ ಇಂದು ಹೊಲದಲ್ಲಿ ವಿಷಯುಕ್ತವಾದ ಸೊಪ್ಪು ತಿಂದು ಸುಮಾರು ಇಪ್ಪತ್ತಕ್ಕೂ ಹೆಚ್ಚು ಕುರಿಗಳು ಸಾವನ್ನಪ್ಪಿದ್ದು, ಇಪ್ಪತ್ತಕ್ಕೂ ಹೆಚ್ಚು ಕುರಿಗಳು ಅಸ್ವಸ್ಥವಾಗಿರುವ ಘಟನೆ ವರದಿಯಾಗಿದೆ.

ಕಾಟಪ್ಪ, ಗೋಪಾಲಪ್ಪ, ತಿಪ್ಪೇಸ್ವಾಮಿ ಮತ್ತು ರತ್ನಮ್ಮ ಎಂಬುವವರಿಗೆ ಸೇರಿದ ಕುರಿಗಳಾಗಿದ್ದು ಸ್ಥಳೀಯ ಪಶುವೈದ್ಯರು ಅಸ್ವಸ್ಥ ಕುರಿಗಳಿಗೆ ಚಿಕಿತ್ಸೆ ನೀಡಿದರು.

ಕುರಿಗಳ ಸಾವಿನಿಂದ ತೀವ್ರ ಆರ್ಥಿಕ ಸಂಕಷ್ಟಕ್ಕೆಗುರಿಯಾಗಿರುವ ಬಡ ರೈತರಿಗೆ ಸರ್ಕಾರ ತಕ್ಷಣ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

# ಎವಿಕೆ ಕಾಲೇಜಿನ ವಿದ್ಯಾರ್ಥಿನಿಯರ ತರಾವರಿ ಖಾದ್ಯಗಳ ಕೈ ರುಚಿ

ದಾವಣಗೆರೆ, ಜು.27- ನಗರದ ಎವಿಕೆ ಕಾಲೇಜಿನ ಅಂಗಳದಲ್ಲಿಂದು ತರಾವರಿಯ ಖಾದ್ಯ, ತಿನಿಸುಗಳ ಗಮಲು ಹರಡಿತ್ತು. ಅಲ್ಲದೇ ಕಣ್ಣು ಹಾಯಿಸಿದರೆ ಬಾಯಲ್ಲಿ ನೀರೂರಿಸುವ ಜಂಕ್‌ಫುಡ್‌ಗಳು, ದೇಶಿ ಅಡುಗೆ ಕಂಡುಬಂದವು.

ಕಾಲೇಜಿನಲ್ಲಿ ಪುಸ್ತಕ, ಪೆನ್ನನ್ನು ಹಿಡಿಯುತ್ತಿದ್ದ ವಿದ್ಯಾರ್ಥಿನಿಯರ ಕೈಯಲ್ಲಿ ಸೌಟು, ಬಾಣಲೆ ಸೇರಿದಂತೆ ಅಡುಗೆ ತಯಾರಿಕಾ ಸಾಮಗ್ರಿಗಳು, ತಿನಿಸು ಪದಾರ್ಥಗಳು, ತಾವೇ ಸಿದ್ಧಪಡಿಸಿದ ಖಾದ್ಯಗಳು ಇದ್ದವು. ಆ ಮುಖೇನ ವಿದ್ಯಾರ್ಥಿನಿಯರು ಓದಿಗೂ ಸೈ, ಸವಿರುಚಿಯ ಅಡುಗೆ ತಯಾರಿಕೆಗೂ ಸೈ ಎಂಬುದನ್ನು ಸಾಬೀತುಪಡಿಸಿದರು.

ಪುಸ್ತಕ ಜ್ಞಾನದ ಜೊತೆಗೆ ವ್ಯವಹಾರಿಕ ಜ್ಞಾನವನ್ನು ಕಾಲೇಜು ಹಂತದಲ್ಲೇ ಬೆಳೆಸುವ ದೃಷ್ಟಿಯಿಂದ ಎವಿಕೆ ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಆಹಾರ ಮೇಳದಲ್ಲಿ ಕಾಲೇಜಿನ ಪಿಯುಸಿ ಮತ್ತು ಪದವಿ ವಿದ್ಯಾರ್ಥಿನಿಯರು ಬೆಳಿಗ್ಗೆಯಿಂದ ಸಂಜೆವರೆಗೂ ಬಗೆ ಬಗೆಯ ಖಾದ್ಯ, ತಿನಿಸು, ಆಹಾರವನ್ನು ವಿಶೇಷತೆಯೊಂದಿಗೆ ಸ್ವಾದಿಷ್ಟವಾಗಿ ಸಿದ್ಧಪಡಿಸಿ, ಅವುಗಳ ಸವಿಯನ್ನು ಬೋಧಕರು ಮತ್ತು ಸಹಪಾಠಿಗಳಿಗೆ ಉಣಬಡಿಸಿದರು. ಅಲ್ಲದೇ ತಾವು ತಯಾರಿಸಿದ ಖಾದ್ಯಗಳಿಗೆ ದರ ನಿಗದಿಪಡಿಸಿ ಮಾರಾಟ ಮಾಡಿ ಕಾಂಚಾಣ ಎಣಿಸಿದರು.

ಮೇಳದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರು ಬೆಳಿಗ್ಗೆಯಿಂದಲೇ ಹೆಲ್ದಿ ಫುಡ್ ಮತ್ತು ಸ್ಪೈಸಿ ಫುಡ್, ಕೆಲ ಖಾದ್ಯಗಳನ್ನು ಉತ್ಸಾಹಿತರಾಗಿ ಸಿದ್ಧಪಡಿಸಿದ್ದರು. ಮತ್ತೆ ಕೆಲವರು ಮನೆಯಿಂದಲೇ ಅಡುಗೆ ತಯಾರಿಸಿ ತಂದಿದ್ದರು. ವಿದ್ಯಾರ್ಥಿನಿಯರು ತಯಾರಿಸಿದ್ದ ಖಾದ್ಯಗಳು ಮನಸೆಳೆದವಲ್ಲದೇ, ಅವುಗಳನ್ನು ಸವಿಯಬೇಕೆಂಬ ಆಸೆಯುಂಟು ಮಾಡಿತು.



ಮೇಳದಲ್ಲಿ 58 ಸ್ಟಾಲ್‌ಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ಪಿಯು ವಿದ್ಯಾರ್ಥಿನಿಯರಿಗಾಗಿ 28 ಮತ್ತು ಪದವಿ ವಿದ್ಯಾರ್ಥಿನಿಯರಿಗಾಗಿ 30 ಸ್ಟಾಲ್‌ಗಳನ್ನು ನೀಡಲಾಗಿತ್ತು. ಮೇಳದಲ್ಲಿ ಪ್ರಧಾನವಾಗಿ ಪಾನಿಪೂರಿ, ಬ್ರೆಡ್‌ಟೋಸ್ಟ್, ಮಸಾಲಾ ಮಂಡಕ್ಕಿ, ಬೋಂಡಾ, ಒರಿಯೋ ಬ್ರೆಡ್ ಟೋಸ್ಟ್, ಸ್ಯಾಂಡ್‌ವಿಚ್, ಮಸಾಲಾ ಕುರ್‌ಕುರೆ, ಚನ್ನಚಾಟ್, ಕೋಕೊ ನೆಟ್ ಬರ್ಫಿ, ಡ್ರೈ ಜಾಮೂನ್, ಮಸಾಲ ಪುರಿ, ಪಾನಿ ಪೂರಿ, ಮಿಲ್ಕ್ ಶೇಕ್, ಬ್ರೆಡ್ ಕೇಕ್, ಸ್ಯಾಂಡ್ ವಿಚ್, ಮಸಾಲ ಶೇಂಗಾ, ಅವಲಕ್ಕಿ ಮೊಸರನ್ನ, ಫ್ರೂಟ್ ಸಲಾಡ್, ಬನಾನ ಸೈಡ್ ಡಿಶ್, ಆನಿಯನ್ ಸಲಾಡ್ ಹೀಗೆ ಮೊದಲಾದ ಜಂಕ್‌ಫುಡ್, ಸ್ಪೈಸಿ ಚಾಟ್ ಗಳು ಹೆಚ್ಚು ಕಂಡು ಬಂದವು. ರಾಗಿಮುದ್ದೆ, ರಾಗಿ ರೊಟ್ಟಿ, ಶ್ಯಾವಿಗೆ ಪಾಯಸ, ಜೋಳದ ರೊಟ್ಟಿಯಂತಹ ದೇಶಿಯ ಅಡುಗೆಗಳು ಕಂಡುಬಂದವು. ಬೆಣ್ಣೆದೋಸೆ, ಮಸಾಲಾ ಮಂಡಕ್ಕಿ, ಪಲಾವ್, ಚಿತ್ರಾನ್ನ, ಈರುಳ್ಳಿ ಬೋಂಡಾ ಸಹ ಬಿಸಿ ಬಿಸಿಯಾಗಿ ಸವಿಯಲು ನೀಡಲಾಯಿತು.

ಹೀಗೆ ತಯಾರಿಸಿದ ಅಡುಗೆಯನ್ನು ಸವಿದು ನೋಡುವಂತೆ ವಿದ್ಯಾರ್ಥಿನಿಯರು ಸಹಪಾಠಿಗಳು, ಬೋಧಕರು, ಅಷ್ಟೇ ಏಕೆ ಅತಿಥಿಗಳನ್ನು ಸೆಳೆದರು. ವಿದ್ಯಾರ್ಥಿನಿಯರ ಈ ಖಾದ್ಯಗಳ ಸವಿಯನ್ನು ಹಣ ನೀಡಿ ಖರೀದಿಸಿ ಸವಿದು ಮೆಚ್ಚುಗೆ ವ್ಯಕ್ತಪಡಿಸಲಾಯಿತು.

**ದೈವದ ಮನೆ :** ಈ ಮೇಳದಲ್ಲಿ ವಿಶೇಷವಾಗಿ ದೈವದ ಕೋಣೆ ನಿರ್ಮಿಸಿ ಅಲ್ಲಿ ವಿದ್ಯಾರ್ಥಿನಿಯರಾದ ವರ್ಷಿಣಿ ಭಾರತ ದೈವವಾಗಿ, ವಿಜಯಲಕ್ಷ್ಮಿ ನಾಗವಲ್ಲಿಯಾಗಿ, ಜೋಕರ್ ದೈವವಾಗಿ ಸಂಜನಾ, ಅರ್ಫಿಯಾ ಮತ್ತು ಎನ್.ಪಿ. ಜ್ಯೋತಿ ದೈವದ ಉಡುಪು ಧರಿಸಿ, ಕೋಣೆಗೆ ಬಂದವರಿಗೆ ದೈವದ ಅವತಾರಗಳನ್ನು ಪ್ರದರ್ಶಿಸಿ, ಭಯ ಬರುವಂತಹ ನಟನೆ ಮಾಡಿದರು.

**ಮೇಳಕ್ಕೆ ಚಾಲನೆ :** ಮೇಳಕ್ಕೆ ಚಾಲನೆ ನೀಡಿದ ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಕಿರುವಾಡಿ ಗಿರಿಜಮ್ಮ, ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ.ಹೆಚ್. ಮುರುಗೇಂದ್ರಪ್ಪ ಮತ್ತಿತರರು ಮೇಳದ ಪ್ರತಿಯೊಂದು ಕಡೆಗಳಿಗೂ ತೆರಳಿ ವಿದ್ಯಾರ್ಥಿನಿಯರ ಅಡುಗೆ ತಯಾರಿಕಾ ಕೌಶಲ್ಯವನ್ನು ವೀಕ್ಷಿಸಿದರಲ್ಲದೇ, ಕೈ ರುಚಿಯನ್ನು ಸವೆದರು.

ಈ ವೇಳೆ ಮಾತನಾಡಿದ ಕಿರುವಾಡಿ ಗಿರಿಜಮ್ಮ, ಓದು ಮತ್ತು ಅಡುಗೆ ತಯಾರಿ ಎರಡೂ ಹೆಣ್ಣು ಮಕ್ಕಳಿಗೆ ಅತ್ಯವಶ್ಯಕವಾದದ್ದು. ಓದುವ ಸಂದರ್ಭದಲ್ಲೇ ಅದಕ್ಕೆ ಹೆಚ್ಚಿನ ಮಹತ್ವ ನೀಡಬೇಕು ಮತ್ತು ಮನೆಯಲ್ಲಿ ಅವಕಾಶ ಸಿಕ್ಕಾಗ ಅಡುಗೆ ಕೆಲಸದಲ್ಲಿ ತಾಯಿಗೆ ನೆರವಾಗುವ ಮೂಲಕ ತಾನು ಕೂಡ ಅಡುಗೆ ಮಾಡುವುದನ್ನು ಕಲಿಯಬೇಕು. ಅಡುಗೆ ತಯಾರಿಕೆ ಮತ್ತು ಸರಬರಾಜು ಇಂದು ದೊಡ್ಡ ಉದ್ಯಮವಾಗಿ ಹೊರಹೊಮ್ಮಿದೆ. ಇಂತಹ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡರೆ ಇದರಲ್ಲಿಯೇ ಬದುಕು ರೂಪಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಪ್ರೊ. ಸಿ.ಹೆಚ್. ಮುರುಗೇಂದ್ರಪ್ಪ ಮಾತನಾಡಿ, ಫಾಸ್ಟ್ ಫುಡ್ ಸಂಸ್ಕೃತಿಯಿಂದ ಇಂದು ಎಲ್ಲರೂ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದೇವೆ. ಆದ್ದರಿಂದ ಇದಕ್ಕೆ ಕಡಿವಾಣ ಹಾಕಬೇಕಾದ ಅನಿವಾರ್ಯತೆ ಇದೆ. ಭವಿಷ್ಯದಲ್ಲಿ ಸರ್ಕಾರಿ ಕೆಲಸಗಳು ಸಿಗುವುದು ವಿರಳ. ಈ ಹಿನ್ನೆಲೆಯಲ್ಲಿ ಸ್ವಯಂ ಉದ್ಯೋಗಕ್ಕೆ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದರು.

ಕಾಲೇಜು ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ಮಾತನಾಡಿ, ಆರೋಗ್ಯ ಭಾಗ್ಯ ಬರಬೇಕಾದರೆ ನಮ್ಮ ಆಹಾರ ಶೈಲಿ ಸರಿಯಾಗಿರಬೇಕು. ಆಹಾರ ತಿನ್ನುವುದು ಕೂಡ ಒಂದು ಕಲೆ ಎಂದರು.

ಕಾರ್ಯಕ್ರಮದಲ್ಲಿ ಎವಿಕೆ ಪಿಯು ಕಾಲೇಜು ಪ್ರಾಂಶುಪಾಲ ಎ.ಬಿ. ಶಿವನಗೌಡ ಸೇರಿದಂತೆ ಇತರರು ಇದ್ದರು.

## ಬಸವೇಶ್ವರ - ದಾನಮ್ಮದೇವಿ ದೇವಸ್ಥಾನ ಇಂದು ನಾಗರ ಅಮಾವಾಸ್ಯೆ ಪೂಜೆ

ದಾವಣಗೆರೆಯ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ದಾನಮ್ಮದೇವಿ ದೇವಸ್ಥಾನದಲ್ಲಿ ಇಂದು ನಾಗರ ಅಮಾವಾಸ್ಯೆ ಪೂಜೆ ಏರ್ಪಡಿಸಲಾಗಿದೆ. ಬೆಳಿಗ್ಗೆ ಅಭಿಷೇಕ ಮತ್ತು ವಿಶೇಷ ಹೂವಿನ ಅಲಂಕಾರ ಪೂಜೆ ಹಾಗೂ ಮಧ್ಯಾಹ್ನ ದಾಸೋಹ ಏರ್ಪಡಿಸಲಾಗಿದೆ.

**ದಾಸೋಹ ಸೇವಾರ್ಥಿಗಳು :** ಗೌಡ್ರ ಜಯದೇವಪ್ಪ ಅಂಡ್ ಸನ್ಸ್, ಚೌಕಿಪೇಟೆ ಕುಟುಂಬ, ಶ್ರೀಮತಿ ರೇಣುಕಾ ಸುಬ್ರಾಯ, ಭಾಗ್ಯಶ್ರೀ ಯೋಗೇಂದ್ರ ಮತ್ತು ಮಕ್ಕಳು, ವಿರೂಪಾಕ್ಷಪ್ಪ ಸುಮಿತ್ರ, ಮಕ್ಕಳು, ಮೊಮ್ಮಕ್ಕಳು ಹಾಗೂ ಶ್ರೀಮತಿ ಗೌರಮ್ಮ ಬಸವರಾಜಪ್ಪ, ಮಕ್ಕಳು, ಕುಟುಂಬದವರು.

ವಿ.ಸೂ: ಪ್ರತಿ ತಿಂಗಳ ಅಮವಾಸ್ಯೆಗೆ ದಾಸೋಹ ಇರುತ್ತದೆ. ಇಚ್ಛಾಸಕ್ತರು ತನು, ಮನ, ಧನ ಅರ್ಪಿಸಬೇಕಾಗಿ ವಿನಂತಿ.

## ಕಟ್ಟಡ ಮಂಜೂರಾತಿಗೆ ಮನವಿ

**(3ನೇ ಪುಟದಿಂದ)** ಕಛೇರಿ ಹಾಗೂ ಅಂಚೆ ಅಧೀಕ್ಷಕರ ಕಛೇರಿಯನ್ನೂ ಸಹ ನಿರ್ಮಾಣ ಮಾಡಬಹುದಾಗಿದೆ ಎಂಬುದನ್ನು ಸಂಸದರು ಸಚಿವರಿಗೆ ವಿವರಿಸಿದ್ದಾರೆ.

ಸಂಸದರ ಮನವಿಗೆ ಪೂರಕವಾಗಿ ಸ್ಪಂದಿಸಿದ ಸಚಿವರು, ದಾವಣಗೆರೆ ಅಂಚೆ ಅಧೀಕ್ಷಕ ಕಛೇರಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಅಗತ್ಯ ಪ್ರಸ್ತಾವನೆ ತರಿಸಿಕೊಂಡು ಮಂಜೂರಾತಿ ನೀಡುವ ಭರವಸೆ ನೀಡಿದರು.

ಶ್ರೀ ಸಾಯಿ ಟ್ಯುಟೋರಿಯಲ್ಸ್, ದಾವಣಗೆರೆ. In Association with ಚಾಣುಕ್ಯ ಪಿಯು ಮತ್ತು ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.
GD : 0406 DU : 1325
ARE YOU FAILED IN 2ND PUC?
DONT WORRY... 100% RESULT
ನೀವು ಎಷ್ಟೇ Dull ಇದ್ದರೂ ಫಲಿತಾಂಶ ಖಂಡಿತ
Tuitions for 2nd PU Commerce and Science will be started soon.
Address : SHREE SAI TUTORIALS, ABOVE I CARE mobile shop, Beside Byadagi Shetru School, P.J. Extn., Davangere.
Hello : 63607 42762, 99640 28812, 81500 82887



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು


75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ನವ ಭಾರತಕ್ಕಾಗಿ
ನವ ಕರ್ನಾಟಕ

# ಸರ್ವರ ವಿಕಾಸಕ್ಕೆ ಸಮೃದ್ಧ ಕರ್ನಾಟಕ

## ಇದು ನಮ್ಮ ಸಂಕಲ್ಪ





ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಡಬಲ್ ಎಂಜಿನ್ ಸರ್ಕಾರ ಮಾನವೀಯತೆ – ಅಂತಃಕರಣಗಳನ್ನೆ ಜೀವಾಳವಾಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿದೆ. ಕಳೆದ ಒಂದು ವರ್ಷದಲ್ಲಿ ಜನರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಜೊತೆಗೆ ಜನ ಕಲ್ಯಾಣ, ಅಭಿವೃದ್ಧಿ ಹಾಗೂ ವಿತ್ತೀಯ ಶಿಸ್ತನ್ನು ಸರಿದೂಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿದೆ.

- ಕೃಷಿಕರು, ಕಾರ್ಮಿಕರು ಹಾಗೂ ದುರ್ಬಲರ ಬದುಕಿನಲ್ಲಿ ಆಶಾಕಿರಣ
- ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ
- ಕೈಗಾರಿಕೆ, ಶಿಕ್ಷಣ, ಮೂಲಭೂತ ಸೌಕರ್ಯ ಸೃಷ್ಟಿಯಲ್ಲಿ ಗುರುತರ ಪ್ರಗತಿ
- ನಾಗರಿಕ ಸೇವೆಗಳಲ್ಲಿ ಕ್ರಾಂತಿಕಾರಕ ಸುಧಾರಣೆ



ಸರ್ವರ ವಿಕಾಸಕ್ಕೆ ಸಮೃದ್ಧ ಕರ್ನಾಟಕ | ಇದು ನಮ್ಮ ಸಂಕಲ್ಪ

### ಎಸ್‌ಸಿ/ಎಸ್‌ಟಿ ಸಮುದಾಯಗಳ ಕಲ್ಯಾಣ

- ಎಸ್‌ಸಿ/ಎಸ್‌ಟಿ ನಿಗಮಗಳಿಗೆ ಮೂಲ ಅನುದಾನ **ರೂ.580.19 ಕೋಟಿ.** ಹೆಚ್ಚುವರಿ ಅನುದಾನ **ರೂ.410 ಕೋಟಿ. ಒಟ್ಟು ರೂ.990.19 ಕೋಟಿ**
- ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ **ರೂ.572.18 ಕೋಟಿ** ವಿದ್ಯಾರ್ಥಿವೇತನ ವಿತರಣೆ
- **ಕುಟೀರ ಜ್ಯೋತಿ** – ಉಚಿತ ವಿದ್ಯುತ್ ಸರಬರಾಜು **75 ಯೂನಿಟ್‌ಗಳಿಗೆ ಏರಿಕೆ.**
- ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ
- **1,717 ಫಲಾನುಭವಿಗಳಿಗೆ 227.86 ಕೋಟಿ** ವೆಚ್ಚದಲ್ಲಿ **2,241.62 ಎಕರೆ** ಜಮೀನು ವಿತರಣೆ
- **"ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ"** ಯೋಜನೆಯಡಿ **ರೂ.250 ಕೋಟಿ** ವೆಚ್ಚದಲ್ಲಿ 5 ಜಿಲ್ಲೆಗಳಲ್ಲಿ ತಲಾ **1,000 ಸಾಮರ್ಥ್ಯದ** ವಿದ್ಯಾರ್ಥಿನಿಲಯ ಸಮುಚ್ಚಯಗಳ ನಿರ್ಮಾಣಕ್ಕೆ ಕ್ರಮ.
- ಭೂ ಒಡೆತನ ಯೋಜನೆಯಡಿ ಘಟಕ ವೆಚ್ಚ 15 ಲಕ್ಷ ರೂ.ಗಳಿಂದ **20 ಲಕ್ಷ ರೂ.ಗಳಿಗೆ ಹೆಚ್ಚಳ**

### ರೈತ, ಕೃಷಿ, ತೋಟಗಾರಿಕೆ

- **ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮ–9.98 ಲಕ್ಷ ವಿದ್ಯಾರ್ಥಿಗಳಿಗೆ ರೂ.438.69 ಕೋಟಿ** ವಿದ್ಯಾರ್ಥಿವೇತನ **ವಿತರಣೆ**
- ಪ್ರಧಾನಮಂತ್ರಿ **ಕಿಸಾನ್ ಸಮ್ಮಾನ್** ನಿಧಿ ಯೋಜನೆಯಡಿ 2021–22ನೇ ಸಾಲಿನಲ್ಲಿ **50.35 ಲಕ್ಷ ರೈತರಿಗೆ** ಹಾಗೂ 2022–23ನೇ ಸಾಲಿನಲ್ಲಿ ಇಲ್ಲಿಯವರೆಗೆ **47.83 ಲಕ್ಷ ರೈತರಿಗೆ ನೆರವು**
- ಪ್ರವಾಹದಿಂದಾದ ಬೆಳೆ ನಷ್ಟಕ್ಕೆ 48 ಗಂಟೆಗಳಲ್ಲೇ ಪರಿಹಾರ ವಿತರಣೆ. **18.56 ಲಕ್ಷ ರೈತರಿಗೆ ಅನುಕೂಲ**
- ಕೃಷಿ ಯಾಂತ್ರೀಕರಣ ಪ್ರೋತ್ಸಾಹಿಸಲು ಪ್ರತಿ ಎಕರೆಗೆ **ರೂ.250 ಡೀಸೆಲ್ ಸಹಾಯಧನ.** ಗರಿಷ್ಠ 5 ಎಕರೆ.
- ರೈತರ ಆದಾಯ ಹೆಚ್ಚಿಸಲು **ಸೆಕೆಂಡರಿ ಕೃಷಿ ನಿರ್ದೇಶನಾಲಯದ ಸ್ಥಾಪನೆ**
- **ದ್ರಾಕ್ಷಿ ಅಭಿವೃದ್ಧಿ ಮತ್ತು ದ್ರಾಕ್ಷಾರಸ ಮಂಡಳಿ ಸ್ಥಾಪನೆ**

### ನೇಕಾರರ ಕಲ್ಯಾಣ

- **ನೇಕಾರ ಸಮ್ಮಾನ್** ನೆರವಿನ ಮೊತ್ತ ರೂ.2,000/– ದಿಂದ **ರೂ.5,000/–ಕ್ಕೆ ಹೆಚ್ಚಳ.**
- 2021–22ನೇ ಸಾಲಿನಲ್ಲಿ **49,544 ನೇಕಾರರಿಗೆ** ನೇರ ನಗದು ವರ್ಗಾವಣೆ
- ನೇಕಾರರ ಮಕ್ಕಳಿಗೂ ವಿದ್ಯಾರ್ಥಿವೇತನ ಯೋಜನೆ

### ಮೀನುಗಾರಿಕೆ ಇಲಾಖೆ

- ಮೀನುಗಾರರ ಆದಾಯ ಹೆಚ್ಚಿಸಲು **100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ** ನೆರವು ನೀಡುವ **"ಮತ್ಸ್ಯ ಸಿರಿ"** ಯೋಜನೆ

### ಕಾರ್ಮಿಕ ಕಲ್ಯಾಣ

- **ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ಯೋಜನೆ** ಜಾರಿ. **2.97 ಲಕ್ಷ ವಿದ್ಯಾರ್ಥಿಗಳಿಗೆ ರೂ.462.12 ಕೋಟಿ**


### ಸಾಮಾಜಿಕ ಭದ್ರತೆ

- ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಧವಾ ವೇತನ, ಮೈತ್ರಿ, ಮನಸ್ವಿನಿ, ವಿಕಲಚೇತನರ ಮಾಸಾಶನ ಹಾಗೂ ಆಸಿಡ್ ದಾಳಿ ಸಂತ್ರಸ್ತರ ಯೋಜನೆಗಳ ಪಿಂಚಣಿ ಮೊತ್ತ ಹೆಚ್ಚಳ. **75 ಲಕ್ಷ ಫಲಾನುಭವಿಗಳಿಗೆ** ಅನುಕೂಲ.



















### ಅಮೃತ ಯೋಜನೆಗಳು

- **ಭಾರತದ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ವಿವಿಧ ಅಭಿವೃದ್ಧಿ, ಕಲ್ಯಾಣ ಕಾರ್ಯಕ್ರಮಗಳಿಗಾಗಿ ಅಮೃತ ಯೋಜನೆಗಳ ಜಾರಿ**

### ಹೂಡಿಕೆ ಆಕರ್ಷಣೆ

- 551 ಯೋಜನೆಗಳಿಗೆ ಅನುಮೋದನೆ. **ರೂ.40,577 ಕೋಟಿ ಹೂಡಿಕೆ, 1.64 ಲಕ್ಷ ಜನರಿಗೆ ಉದ್ಯೋಗವಕಾಶ**
- **ವಿಶ್ವ ಆರ್ಥಿಕ ವೇದಿಕೆ, ದಾವೋಸ್ 2022ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಉನ್ನತ ಮಟ್ಟದ ಸಚಿವರ ನಿಯೋಗ.** ರಾಜ್ಯದಲ್ಲಿ **ರೂ.59,350 ಕೋಟಿ** ಬಂಡವಾಳ ಹೂಡಿಕೆ ಒಪ್ಪಂದ
- ಹೆಚ್ಚುವರಿಯಾಗಿ 5 ಒಡಂಬಡಿಕೆಗಳಿಗೆ ಸಹಿ. ಇವುಗಳಿಂದ **ರೂ.1,11,765 ಕೋಟಿ** ಬಂಡವಾಳ ಹೂಡಿಕೆಯಾಗಲಿದೆ.

### ವಿದೇಶಿ ನೇರ ಹೂಡಿಕೆಯಲ್ಲಿ ಕರ್ನಾಟಕ ದೇಶದಲ್ಲೇ ಮೊದಲು

- **ಏಪ್ರಿಲ್ 2021–ಮಾರ್ಚ್ 2022ರ ಅವಧಿಯಲ್ಲಿ ಭಾರತದ ಒಟ್ಟು ವಿದೇಶಿ ನೇರ ಹೂಡಿಕೆಯ ಪ್ರಮಾಣದಲ್ಲಿ 1.63 ಲಕ್ಷ ಕೋಟಿ ರೂ. (ಶೇ.37.5 ರಷ್ಟು) ಹೂಡಿಕೆ ಕರ್ನಾಟಕಕ್ಕೇ ಅಗ್ರಸ್ಥಾನ**

### ಆವಿಷ್ಕಾರದಲ್ಲಿ (ಇನ್ನೋವೆಷನ್) ಕರ್ನಾಟಕಕ್ಕೆ ಮೊದಲ ಸ್ಥಾನ

- **ನೀತಿ ಆಯೋಗದ ಇಂಡಿಯಾ ಇನ್ನೋವೇಷನ್ ಇಂಡೆಕ್ಸ್, 2022 ರಲ್ಲಿ ಕರ್ನಾಟಕ ಮೊದಲ ಸ್ಥಾನ ಗಳಿಸಿದೆ.**

### ಸಹಕಾರ ಸಮೃದ್ಧಿ

- **28.42 ಲಕ್ಷ ರೈತರಿಗೆ ರೂ.20,971.79 ಕೋಟಿ ಕೃಷಿ ಸಾಲ ವಿತರಣೆ.**
- **ಯಶಸ್ವಿನಿ ಯೋಜನೆ ಮರುಜಾರಿಗೆ ಆದೇಶ ಹೊರಡಿಸಲಾಗಿದೆ**
- ಹಾಲು ಉತ್ಪಾದಕರ ಅನುಕೂಲಕ್ಕೆ **ಕ್ಷೀರಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸುವ ಯೋಜನೆ**
- **36,601 ಸ್ವಸಹಾಯ ಗುಂಪುಗಳಿಗೆ** ಸಹಕಾರ ಬ್ಯಾಂಕುಗಳಿಂದ **ರೂ.1,385.17 ಕೋಟಿ** ಸಾಲ ವಿತರಣೆ

### ನೀರಾವರಿ

- ಜುಲೈ 2021 ರಿಂದ ಜೂನ್ 2022ರ ಅಂತ್ಯದವರೆಗೆ **ರೂ.17,270.13 ಕೋಟಿ** ವೆಚ್ಚದಲ್ಲಿ **79,731 ಎಕರೆ** ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.

### ನಗರಾಭಿವೃದ್ಧಿ

- **ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ:** ಬೆಂಗಳೂರು ನಗರದ ಮೂಲಭೂತ ಸೌಕರ್ಯದ ಅಭಿವೃದ್ಧಿಗೆ **ರೂ.6,000 ಕೋಟಿ**
- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ) ಯೋಜನೆ: **ರೂ.3,885 ಕೋಟಿ**

### ಆಹಾರ ಭದ್ರತೆ

- ಆದ್ಯತಾ ಪಡಿತರ ಚೀಟಿದಾರರಿಗೆ ಪ್ರತಿ ಫಲಾನುಭವಿಗೆ **5 ಕೆ.ಜಿ. ಅಕ್ಕಿ, ಜೊತೆಗೆ 1 ಕೆ.ಜಿ. ರಾಗಿ/ಜೋಳ ವಿತರಣೆ.**

### ಗ್ರಾಮೀಣ ನೀರು ಸರಬರಾಜು

- **"ಮನೆ ಮನೆಗೆ ಗಂಗೆ" – ಜಲಜೀವನ್ ಮಿಷನ್ ಯೋಜನೆಯಡಿ 22.85 ಲಕ್ಷ ಮನೆಗಳಿಗೆ ಹೊಸದಾಗಿ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ.**
- **ಜಲಜೀವನ್ ಮಿಷನ್: ಶೇ. 100 ರಷ್ಟು ಗುರಿ ಮುಟ್ಟಲಾಗಿದೆ.**

### ವಸತಿ

- 2021–22ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ **53,636 ಮನೆಗಳಿಗೆ** ಒಟ್ಟು **ರೂ.341.56 ಕೋಟಿ** ಪರಿಹಾರಧನ ಬಿಡುಗಡೆ.
- ವಿವಿಧ ಯೋಜನೆಗಳಡಿ ವಸತಿರಹಿತ ಕುಟುಂಬಗಳಿಗೆ **5 ಲಕ್ಷ ಮನೆಗಳ** ಗುರಿ. **1.4 ಲಕ್ಷ** ಮನೆಗಳಿಗೆ ಕಾರ್ಯಾದೇಶ

**ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸಲು ದೇಶದಲ್ಲೇ ಮೊದಲ ಬಾರಿಗೆ ಹೊಸ ಉದ್ಯೋಗ ನೀತಿ 2022–25ಗೆ ಅನುಮೋದನೆ**

### ನಾಗರಿಕ ಸೇವೆಗಳಲ್ಲಿ ಕ್ರಾಂತಿ

- ನಾಗರಿಕ ಸೇವೆಗಳನ್ನು ಗ್ರಾಮಸ್ಥರಿಗೆ ಅವರಿರುವ ಸ್ಥಳದಲ್ಲಿಯೇ, ಒಂದೇ ಸೂರಿನಡಿ ಒದಗಿಸುವ **'ಗ್ರಾಮ ಒನ್'** ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಆರಂಭಿಸಲಾಗಿದೆ. ಈ ಯೋಜನೆಯಡಿ **44 ಲಕ್ಷ ಅರ್ಜಿಗಳಿಗೆ** ಸೇವೆ ಪೂರೈಕೆ
- **ಜನಸೇವಕ ಯೋಜನೆ:** ಬೃಹತ್ ಬೆಂಗಳೂರು ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ನಾಗರಿಕರ ಮನೆ ಬಾಗಿಲಲ್ಲೇ ಸರ್ಕಾರದ ಸೇವೆಗಳನ್ನು ಒದಗಿಸುವ ವ್ಯವಸ್ಥೆಯ ಆರಂಭ

### ಶಿಕ್ಷಣ

- **ರಾಷ್ಟ್ರೀಯ ಶಿಕ್ಷಣ ನೀತಿ** ಅನುಷ್ಠಾನಗೊಳಿಸಿದ ಮೊದಲ ರಾಜ್ಯ
- 7 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು Karnataka Institute of Technology ಗಳಾಗಿ ಉನ್ನತೀಕರಣ
- **ರೂ.4,736 ಕೋಟಿ** ವೆಚ್ಚದಲ್ಲಿ ರಾಜ್ಯದ 150 ಐಟಿಐಗಳನ್ನು ತಂತ್ರಜ್ಞಾನ ಕೇಂದ್ರಗಳನ್ನಾಗಿ ಉನ್ನತೀಕರಣ.
- **1,240 ಉಪನ್ಯಾಸಕರು, 15,000 ಶಾಲಾ ಶಿಕ್ಷಕರ** ನೇಮಕಾತಿ
- ಅತಿಥಿ ಉಪನ್ಯಾಸಕರ ಗೌರವಧನ: ಸೇವಾನುಭವ ಆಧರಿಸಿ **ರೂ.26,000 – ರೂ.32,000** ಗಳಿಗೆ ಹೆಚ್ಚಳ
- **ರೂ.1,412 ಕೋಟಿ** ವೆಚ್ಚದಲ್ಲಿ **8,101** ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಕ್ರಮ. 3 ಲಕ್ಷಕ್ಕಿಂತ ಹೆಚ್ಚು ಮಕ್ಕಳಿಗೆ ಅನುಕೂಲ.

### ಆರೋಗ್ಯ ಮತ್ತು ಕುಟುಂಬ ಕಲ್ಯಾಣ

- ಕೋವಿಡ್–19 3ನೇ ಅಲೆಯ ಪರಿಣಾಮಕಾರಿ ನಿರ್ವಹಣೆ. ಲಸಿಕೆಗಳ **11.4 ಕೋಟಿ ಡೋಸ್‌ಗಳನ್ನು** ನೀಡಲಾಗಿದೆ.
- 100 ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ಶಿಕ್ಷಣ ಗುಣಮಟ್ಟ ವೃದ್ಧಿ, ಆರೋಗ್ಯಸೇವೆಗಳ ವರ್ಧನೆ ಮತ್ತು ಅಪೌಷ್ಠಿಕತೆ ನಿವಾರಣೆಗೆ ಕ್ರಮ. ಒಟ್ಟು **ರೂ.3,000 ಕೋಟಿ** ಅನುದಾನ.
- ಕ್ಯಾನ್ಸರ್ ರೋಗಿಗಳಿಗೆ **ಕಿಮೋಥೆರಪಿ** ಸೌಕರ್ಯ ಒದಗಿಸಲು ಆಯ್ದ 10 ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ **Infusion Centre** ಗಳನ್ನು ಸ್ಥಾಪಿಸಲು ತಾತ್ವಿಕ ಅನುಮೋದನೆ
- 100 ಅಪೇಕ್ಷಿತ ತಾಲ್ಲೂಕುಗಳಲ್ಲಿ ತಲಾ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಗುರುತಿಸಿ ಅವುಗಳನ್ನು 25 ಹಾಸಿಗೆಯ ಮಾದರಿ ಸಮುದಾಯ ಆಸ್ಪತ್ರೆಗಳನ್ನಾಗಿ ಮುಂದಿನ 2 ವರ್ಷಗಳಲ್ಲಿ **ರೂ.1,000 ಕೋಟಿ** ವೆಚ್ಚದಲ್ಲಿ ಉನ್ನತೀಕರಿಸಲು ಕ್ರಮ
- ಮುಖ್ಯ ನಗರಗಳಲ್ಲಿ **438 ನಮ್ಮ ಕ್ಲಿನಿಕ್‌ಗಳ** ಸ್ಥಾಪನೆಗೆ ಕ್ರಮ
- ಉಚಿತ **ಡಯಾಲಿಸಿಸ್** ಸೇವೆಗಳನ್ನು ಪ್ರತಿ ತಿಂಗಳಿಗೆ ಈಗಿರುವ 30,000 ಸೈಕಲ್‌ಗಳಿಂದ **60,000 ಸೈಕಲ್‌ಗಳಿಗೆ** ಹೆಚ್ಚಿಸಲು **ರೂ.20 ಕೋಟಿ** ಹೆಚ್ಚುವರಿ ಅನುದಾನ
- ಉತ್ತರ ಕರ್ನಾಟಕದಲ್ಲಿ ಹೈಟೆಕ್ ಚಿಕಿತ್ಸೆ ಕಲ್ಪಿಸಲು **ಹುಬ್ಬಳ್ಳಿಯಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ಪ್ರಾದೇಶಿಕ ಹೃದ್ರೋಗ ಕೇಂದ್ರವನ್ನು ರೂ.250 ಕೋಟಿ** ವೆಚ್ಚದಲ್ಲಿ ಸ್ಥಾಪಿಸಲಾಗುವುದು. **ಬೆಳಗಾವಿಯಲ್ಲಿ ರೂ.50 ಕೋಟಿ** ವೆಚ್ಚದಲ್ಲಿ **ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರ ಸ್ಥಾಪನೆ**
- **500 ಜನ್ಮಜಾತ ಕಿವುಡು ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ಸ್** ಅಳವಡಿಸಿ ಅವರ ವಾಕ್–ಶ್ರವಣ ಸಾಮರ್ಥ್ಯ ಸುಧಾರಿಸಲು **ರೂ. 32 ಕೋಟಿ**

### ರೈಲು/ರಸ್ತೆಗಳ ಅಭಿವೃದ್ಧಿ

- ಧಾರವಾಡ–ಕಿತ್ತೂರು–ಬೆಳಗಾವಿ ರೈಲು ಯೋಜನೆಗೆ ಅನುಮೋದನೆ
- **2,275 ಕಿ.ಮೀ.** ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ಕ್ರಮ

### ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಅನುದಾನ ದ್ವಿಗುಣ: ರೂ.3,000 ಕೋಟಿ ಹಂಚಿಕೆ

- **ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೃಷ್ಣಾ ಭಾಗ್ಯ ಜಲನಿಗಮ ಹಾಗೂ ಕರ್ನಾಟಕ ನೀರಾವರಿ ನಿಗಮಗಳ ವತಿಯಿಂದ ಅಭಿವೃದ್ಧಿ ಕಾರ್ಯಗಳಿಗಾಗಿ ರೂ.2,637.33 ಕೋಟಿ ವೆಚ್ಚ**
- **ಕಲ್ಯಾಣ ಕರ್ನಾಟಕದಲ್ಲಿ ಖಾಲಿ ಇರುವ 25,000 ಸರ್ಕಾರಿ ಹುದ್ದೆಗಳನ್ನು ತುಂಬಲು ಆಡಳಿತಾತ್ಮಕ ಮಂಜೂರಾತಿ**

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte